<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.</u>

<u>ಉಪಸ್ಥಿತರು</u>

ಶ್ರೀ ಎಸ್. ಜೆ. ಕೃಷ್ಣ. ಬಿ.ಎಸ್ಸಿ ಎಲ್ಎಲ್.ಬಿ .,

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

ಸಿ.ಸಿ. ಸಂಖ್ಯೆಃ ೩೦೧/೨೦೧೭

ದಿನಾಂಕಃ ೨೭ ನೇ ಡಿಸೆಂಬರ್ ೨೦೧೯

| | |
|---|---|
| ಫಿರ್ಯಾಧಿ | ಸರ್ಕಾರದ ಪರವಾಗಿ ಕೊಳ್ಳೇಗಾಲ ಪಟ್ಟಣ ಪೊಲೀಸರು |
| | ಮಾನ್ಯ ಸ.ಸ.ಅ.ರವರು, ಕೊಳ್ಳೇಗಾಲ. |

ವಿರುದ್ಧ

| | | |
|---|---|---|
| ಆರೋಪಿಗಳು | ೧ | ಶ್ರೀ ಮಹೇಶ ಅಃ ಮಹದೇವಸ್ವಾಮಿ<br>ಬಿನ್ ಮಾದೇವ ಅಃ ಮಹದೇವಶೆಟ್ಟಿ,<br>ವಯಾಃ ೨೮ ವರ್ಷ, ಗುಂಡಿಮಾಳ ಗ್ರಾಮ,<br>ಕೊಳ್ಳೇಗಾಲ ತಾಲೂಕು. |
| | ೨ | ಶ್ರೀ ಮಹದೇವ ಅಃ ಮಹದೇವಶೆಟ್ಟಿ<br>ವಯಾಃ ೪೮ ವರ್ಷ, ಕೂಲಿಕೆಲಸ,<br>ಗುಂಡಿಮಾಳ ಗ್ರಾಮ, ಕೊಳ್ಳೇಗಾಲ ತಾಲೂಕು. |
| | ೩ | ಶ್ರೀಮತಿ ಬಸಮ್ಮ ಕೋಂ ಮಹದೇವ<br>ಅಃ ಮಹದೇವಶೆಟ್ಟಿ<br>ವಯಾಃ ೪೮ ವರ್ಷ, ಗೃಹಿಣಿ,<br>ಗುಂಡಿಮಾಳ ಗ್ರಾಮ, ಕೊಳ್ಳೇಗಾಲ ತಾಲೂಕು. |

| | | |
|---|---|---|
| | ೪ | ಶ್ರೀಮತಿ ನಾಗಮ್ಮ ಕೋಂ ರಾಜು<br>ವಯಾ: ೪೦ ವರ್ಷ, ಗೃಹಿಣಿ,<br>ಯರಿಯೂರು, ಯಳಂದೂರು ತಾಲೂಕು,<br>ಚಾಮರಾಜನಗರ ಜಿಲ್ಲೆ. |
| | ೫ | ಶ್ರೀ ಸೋಮಣ್ಣ ಬಿನ್ ಲೇಟ್ ಸಿದ್ದಯ್ಯ ,<br>ಮೇಲ್ವಿಚಾರಕರು/ಮ್ಯಾನೇಜರ್,<br>ಶ್ರೀ ಮಹದೇಶ್ವರ ಕಲ್ಯಾಣ ಮಂಟಪ.<br>ಸ್ವಂತ ಊರು: ಕಣ್ಣೂರು ಗ್ರಾಮ,<br>ಕೊಳ್ಳೇಗಾಲ ತಾಲೂಕು. |
| | ೬ | ಶ್ರೀ ಮುಕುಂದವರ್ಮ ಬಿನ್<br>ಲೇಟ್ ತಗಡೂರಯ್ಯ ,<br>ವಯಾ: ೪೯ ವರ್ಷ, ಸಮಾಜ ಸೇವಕರು,<br>ಸತ್ತೇಗಾಲ ಗ್ರಾಮ, ಕೊಳ್ಳೇಗಾಲ ತಾಲೂಕು.<br>(ದೋಷಾರೋಪಣಾ ಪಟ್ಟಿಯಿಂದ ಕೈಬಿಡಲಾಗಿದೆ) |
| | ೭ | ಶ್ರೀ ಕೃಷ್ಣ , ಬಿ.ಎ .,ಎಲ್ ಎಲ್. ಬಿ.,<br>ವಕೀಲರು ಮತ್ತು ನೋಟರಿ, ಯಳಂದೂರು. |
| ಆ 1 ರಿಂದ 4 – ಶ್ರೀ ಎಸ್ ರುದ್ರಾರಾಧ್ಯ., ವಕೀಲರು, ಕೊಳ್ಳೇಗಾಲ<br>ಆ 5 – ಶ್ರೀ ಸಿ ರವಿ ., ವಕೀಲರು, ಕೊಳ್ಳೇಗಾಲ<br>ಆ 7 – ಶ್ರೀ ಡಿ ಎಸ್ ಬಸವರಾಜು ., ವಕೀಲರು, ಕೊಳ್ಳೇಗಾಲ | | |

| | | |
|---|---|---|
| ೧ | ಪ್ರಕರಣದ ದಿನಾಂಕ | ೦೨.೦೫.೨೦೧೬ |
| ೨ | ಪ್ರಕರಣದ ವರದಿಯ ದಿನಾಂಕ | ೦೨.೦೫.೨೦೧೬ |
| ೩ | ಫಿರ್ಯಾಧಿಯ ಹೆಸರು | ಶ್ರೀ ಶೇಷಾದ್ರಿ ಟಿ , ಸಿಡಿಪಿಓ,<br>ಕೊಳ್ಳೇಗಾಲ ಟೌನ್. |

| | | |
|---|---|---|
| ೪ | ಆರೋಪಗಳ ಬಂಧನದ ದಿನಾಂಕ | ನ್ಯಾಯಾಲಯದ ಜಾಮೀನು |
| ೫ | ಸಾಕ್ಷ್ಯ ದಾಖಲೆ ಪ್ರಾರಂಭವಾದ ದಿನಾಂಕ | ೦೪.೧೨.೨೦೧೮ |
| ೬ | ಸಾಕ್ಷ್ಯ ದಾಖಲೆ ಮುಕ್ತಾಯವಾದ ದಿನಾಂಕ | ೦೫.೧೧.೨೦೧೯ |
| ೭ | ದೂರು ನೀಡಿರುವ ಅಪರಾಧ | ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ವಿಧಿ ೦೯, ೧೦, ೧೧ |
| ೮ | ನ್ಯಾಯಾಧೀಶರ ಅಬಿಪ್ರಾಯ | ಆರೋಪಿ-1 ರವರನ್ನು ಬಾಲ್ಯ ವಿವಾಹ ನಿಷೇಧ ಕಾಯ್ದೆ, 2006 ರ ವಿಧಿ 9 ರಂತೆ ದಂಡನೀಯವಾದ ಅಪರಾಧಕ್ಕಾಗಿ ಸಿದ್ಧದೋಷಿ ಎಂದು ಆರೋಪಿ-2 ರಿಂದ 4 ರವರನ್ನು ವಿಧಿ 10 ರಂತೆ ದಂಡನೀಯವಾದ ಅಪರಾಧಕ್ಕಾಗಿ ಸಿದ್ಧದೋಷಿಗಳೆಂದು ತೀರ್ಮಾನಿಸಿ ದಂಡಾದೇಶ ಹೊರಡಿಸಲಾಗಿದೆ. ಆರೋಪಿ-5 ಮತ್ತು 7 ರವರನ್ನು ಬಾಲ್ಯ ವಿವಾಹ ನಿಷೇಧ ಕಾಯ್ದೆ , 2006 ರ ವಿಧಿ 11 ರ ರೀತ್ಯಾ ದಂಡನೀಯವಾದ ಅಪರಾಧದ ಆರೋಪದಿಂದ ದೋಷಾಮುಕ್ತಗೊಳಿಸಿ ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ. |
| ೯ | ಸರ್ಕಾರದ ಪರವಾಗಿ | ಮಾನ್ಯ ಸ.ಸ.ಅ. ಕೊಳ್ಳೇಗಾಲ. |
| ೧೦ | ಆರೋಪಿ ಪರವಾಗಿ | ಆ 1 ರಿಂದ 4 – ಶ್ರೀ ಎಸ್ ರುದ್ರಾರಾಧ್ಯ., ವಕೀಲರು, ಕೊಳ್ಳೇಗಾಲ |

| | | |
|---|---|---|
| | | ಆ5 – ಶ್ರೀ ಸಿ ರವಿ ., ವಕೀಲರು, ಕೊಳ್ಳೇಗಾಲ<br>ಆ7 – ಶ್ರೀ ಡಿ ಎಸ್ ಬಸವರಾಜು ., ವಕೀಲರು, ಕೊಳ್ಳೇಗಾಲ |

(ಎಸ್.ಜೆ. ಕೃಷ್ಣ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

ಃ ತೀರ್ಪು ಃ

ಕೊಳ್ಳೇಗಾಲ ಪಟ್ಟಣ ಪೊಲೀಸರು ಆರೋಪಿಗಳ ವಿರುದ್ಧ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ವಿಧಿ 09, 10, 11 ರ ರೀತ್ಯಾ ದಂಡನೀಯವಾದ ಅಪರಾಧಗಳಿಗಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

೨. ಅಭಿಯೋಜನೆಯ ಪ್ರಕರಣದ ಸಾರಾಂಶ ಕೆಳಗಿನಂತೆ ಇದೆ.

ಆರೋಪಿ–೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರು ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಗ್ಗೆ ೧೦–೩೦ ಘಂಟೆ ಸಮಯದಲ್ಲಿ

ಕು.ಸುಧಾರವರನ್ನು ಮದುವೆಯಾಗುವ ಮೂಲಕ ೧ನೇಆರೋಪಿಯು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦ ರ ವಿಧಿ ೯ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ೧ನೇ ಆರೋಪಿಯ ವಿರುದ್ದ ಆಪಾದನೆ ಮಾಡಲಾಗಿದೆ.

ಆರೋಪಿ–೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ೧ನೇಆರೋಪಿಯ ತಂದೆಯಾದ ೨ನೇಆರೋಪಿ ಮಹದೇವ ಹಾಗೂ ೧ನೇಆರೋಪಿಯ ತಾಯಿಯಾದ ೩ನೇಆರೋಪಿ ಶ್ರೀಮತಿ ಬಸಮ್ಮ ಮತ್ತು ಕು.ಸುಧಾರವರ ತಾಯಿಯಾದ ೪ನೇಆರೋಪಿ ಶ್ರೀಮತಿ ನಾಗಮ್ಮರವರು ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಗ್ಗೆ ೧೦–೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರೊಂದಿಗೆ ಮದುವೆ ಮಾಡಿಸುವ ಮೂಲಕ ಆರೋಪಿ–೨ ರಿಂದ ೪ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೧೦ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ೨ರಿಂದ೪ನೇ ಆರೋಪಿಗಳ ವಿರುದ್ದ ಆಪಾದನೆ ಮಾಡಲಾಗಿದೆ.

ಆರೋಪಿ–೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ೧ನೇಆರೋಪಿಯ ತಂದೆಯಾದ ೨ನೇಆರೋಪಿ ಮಹದೇವ ಹಾಗೂ ೧ನೇಆರೋಪಿಯ ತಾಯಿಯಾದ ೩ನೇಆರೋಪಿ ಶ್ರೀಮತಿ ಬಸಮ್ಮ ಮತ್ತು ಕು.ಸುಧಾರವರ ತಾಯಿಯಾದ ೪ನೇಆರೋಪಿ ಶ್ರೀಮತಿ ನಾಗಮ್ಮ ಹಾಗೂ ೧ನೇಆರೋಪಿಯೊಂದಿಗೆ ಸಹಕರಿಸಿ ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ

ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಗ್ಗೆ ೧೦-೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರೊಂದಿಗೆ ಮದುವೆ ಮಾಡಿಸಲು ಸದರಿ ಕಲ್ಯಾಣ ಮಂಟಪದ ವ್ಯವಸ್ಥಾಪಕರಾದ ೫ನೇಆರೋಪಿಯಾದ ಶ್ರೀ ಸೋಮಣ್ಣರವರು ಸಹಕಾರ ನೀಡಿ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸುವ ಮೂಲಕ ಆರೋಪಿ-೫ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೧೧ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ೫ನೇಆರೋಪಿಯ ವಿರುದ್ದ ಆಪಾದನೆ ಮಾಡಲಾಗಿದೆ.

೪ನೇಆರೋಪಿಯ ಮಗಳಾದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ೧ನೇಆರೋಪಿಯ ತಂದೆಯಾದ ೨ನೇಆರೋಪಿ ಮಹದೇವ ಹಾಗೂ ೧ನೇಆರೋಪಿಯ ತಾಯಿಯಾದ ೩ನೇಆರೋಪಿ ಶ್ರೀಮತಿ ಬಸಮ್ಮ ಮತ್ತು ಕು.ಸುಧಾರವರ ತಾಯಿಯಾದ ೪ನೇಆರೋಪಿ ಶ್ರೀಮತಿ ನಾಗಮ್ಮರವರು ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಗ್ಗೆ ೧೦-೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರೊಂದಿಗೆ ಮದುವೆ ಮಾಡಿಸಲು ೭ನೇಆರೋಪಿಯಾದ ಯಳಂದೂರು ನಗರದಲ್ಲಿ ವಕೀಲರು ಹಾಗೂ ನೋಟರಿ ವೃತ್ತಿ ಮಾಡುತ್ತಿರುವ ಶ್ರೀ ಕೃಷ್ಣರವರು ಆರೋಪಿ-೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು.ಸುಧಾರವರು ದಿನಾಂಕಃ ೦೮.೧೧.೧೯೯೭ರಂದು ಜನಿಸಿರುವುದಾಗಿ ಪ್ರಮಾಣ ಪತ್ರವನ್ನು

ಪ್ರಮಾಣೀಕರಿಸಿಸುವ ಮೂಲಕ ಸಹಕಾರ ನೀಡಿ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸುವ ಮೂಲಕ ಆರೋಪಿ–೨ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೧೧ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ೨ನೇ ಆರೋಪಿಯ ವಿರುದ್ಧ ಆಪಾದನೆ ಮಾಡಲಾಗಿದೆ.

೩. ತನಿಖಾಧಿಕಾರಿಯು ೬ನೇ ಆರೋಪಿ ಶ್ರೀ ಮುಕುಂದವರ್ಮರವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುವುದಿಲ್ಲ. ಆರೋಪಿ೧ರಿಂದ ೫ ಮತ್ತು ೭ರವರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ. ಅಭಿಯೋಜನೆಯ ಕಡತದ ಪ್ರತಿಗಳನ್ನು ಆರೋಪಿಗಳಿಗೆ ಒದಗಿಸಿ ಆಪಾದನೆಯ ಸಾರಾಂಶವನ್ನು ಆರೋಪಿಗಳಿಗೆ ಓದಿ ತಿಳಿಹೇಳಲಾಯಿತು ಆರೋಪಿಗಳು ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಲಿ ಎಂದು ಮನವಿ ಮಾಡಿದ ಕಾರಣ ಅವರ ವಿರುದ್ಧ ಪ್ರಕರಣದ ವಿಚಾರಣೆ ನಡೆಸಲಾಯಿತು.

೪. ಅಭಿಯೋಜನೆಯು ಪ್ರಾಸಾ–೧ ರಿಂದ ಪ್ರಾಸಾ–೬ ರವರನ್ನು ವಿಚಾರಣೆಗೆ ಒಳಪಡಿಸಿ ನಿಪಿ–೧ ರಿಂದ ನಿಪಿ–೯ನ್ನು ಪ್ರದರ್ಶಿಸಿದೆ. ಅಭಿಯೋಜನೆಯ ಸಾಕ್ಷ್ಯ ನೀಡುವಿಕೆಯ ಮುಕ್ತಾಯದ ನಂತರ ಆರೋಪಿಗಳನ್ನು ದಂ.ಪ್ರ.ಸಂ. ವಿಧಿ ೩೧೩(೧)(ಬಿ)ರಡಿ ವಿಚಾರಣೆ ಮಾಡಲಾಯಿತು. ಆರೋಪಿಗಳು ಅಭಿಯೋಜನೆಯ ಸಾಕ್ಷ್ಯದಲ್ಲಿ ತಮಗೆ ವ್ಯತಿರಿಕ್ತವಾಗಿ ಕಂಡುಬಂದ ಎಲ್ಲಾ ಸಂದರ್ಭಗಳನ್ನು ನಿರಾಕರಿಸಿರುತ್ತಾರೆ. ತಮ್ಮ ಅಭಿರಕ್ಷೆಗೆ ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ.

೫. ಪ್ರಕರಣದ ವಿಚಾರಣೆಯ ತರುವಾಯ ಉಭಯ ಪಕ್ಷಕಾರರ ವಾದವನ್ನು ಆಲಿಸಿ ಕಡತವನ್ನು ಕೂಲಂಕಷವಾಗಿ ಪರಿಶೀಲಿಸಿದ್ದೇನೆ. ನನ್ನ ನಿರ್ಣಯಕ್ಕೆ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

**ಅಂಶ**-೧ : ಆರೋಪಿ-೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರು ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಿಗ್ಗೆ ೧೦-೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಮದುವೆಯಾಗುವ ಮೂಲಕ ೧ನೇಆರೋಪಿಯು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೯ರ ರೀತ್ಯಾ ದಂಡನೀಯವಾದ ಅಪರಾಧ ವೆಸಗಿರುವರೆಂಬುದನ್ನು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆ ಇಲ್ಲದಂತೆ ರುಜುವಾತು ಪಡಿಸಿದೆಯೇ?

**ಅಂಶ-೨** : ಆರೋಪಿ-೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ೧ನೇಆರೋಪಿಯ ತಂದೆಯಾದ ೨ನೇಆರೋಪಿ ಮಹದೇವ ಹಾಗೂ ೧ನೇಆರೋಪಿಯ ತಾಯಿಯಾದ ೩ನೇಆರೋಪಿ ಶ್ರೀಮತಿ ಬಸಮ್ಮ ಮತ್ತು ಕು.ಸುಧಾರವರ ತಾಯಿಯಾದ ೪ನೇಆರೋಪಿ ಶ್ರೀಮತಿ ನಾಗಮ್ಮರವರು ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಿಗ್ಗೆ ೧೦-೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ

ಮಹದೇವಸ್ವಾಮಿಯವರೊಂದಿಗೆ ಮದುವೆ ಮಾಡಿಸುವ ಮೂಲಕ ಆರೋಪಿ–೨ ರಿಂದ ೪ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೧೦ರ ರೀತ್ಯಾ ದಂಡನೀಯವಾದ ಅಪರಾಧವನ್ನೆಸಗಿರುವರೆಂಬುದನ್ನು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆ ಇಲ್ಲದಂತೆ ರುಜುವಾತುಪಡಿಸಿದೆಯೇ?

**ಅಂಶ–೩ :** ಆರೋಪಿ–೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ೧ನೇಆರೋಪಿಯ ತಂದೆಯಾದ ೨ನೇಆರೋಪಿ ಮಹದೇವ ಹಾಗೂ ೧ನೇಆರೋಪಿಯ ತಾಯಿಯಾದ ೩ನೇಆರೋಪಿ ಶ್ರೀಮತಿ ಬಸಮ್ಮ ಮತ್ತು ಕು.ಸುಧಾರವರ ತಾಯಿಯಾದ ೪ನೇಆರೋಪಿ ಶ್ರೀಮತಿ ನಾಗಮ್ಮ ಹಾಗೂ ೧ನೇಆರೋಪಿಯೊಂದಿಗೆ ಸಹಕರಿಸಿ ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಿಗ್ಗೆ ೧೦–೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರೊಂದಿಗೆ ಮದುವೆ ಮಾಡಿಸಲು ಸದರಿ ಕಲ್ಯಾಣ ಮಂಟಪದ ವ್ಯವಸ್ಥಾಪಕರಾದ ೫ನೇಆರೋಪಿಯಾದ ಶ್ರೀ ಸೋಮಣ್ಣರವರು ಸಹಕಾರ ನೀಡಿ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸುವ ಮೂಲಕ ಆರೋಪಿ–೫ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೧೧ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವರೆಂಬುದನ್ನು ಅಭಿಯೋಜನೆಯು ಯಾವುದೆ ಸಹಜ ಸಂಶಯಗಳಿಗೆ ಎಡೆ ಇಲ್ಲದಂತೆ ರುಜುವಾತುಪಡಿಸಿದೆಯೇ?

**ಅಂಶ-೪ :** ೪ನೇಆರೋಪಿಯ ಮಗಳಾದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ೧ನೇಆರೋಪಿಯ ತಂದೆಯಾದ ೨ನೇಆರೋಪಿ ಮಹದೇವ ಹಾಗೂ ೧ನೇಆರೋಪಿಯ ತಾಯಿಯಾದ ೩ನೇಆರೋಪಿ ಶ್ರೀಮತಿ ಬಸಮ್ಮ ಮತ್ತು ಕು.ಸುಧಾರವರ ತಾಯಿಯಾದ ೪ನೇಆರೋಪಿ ಶ್ರೀಮತಿ ನಾಗಮ್ಮರವರು ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೩ರಂದು ಬೆಳಿಗ್ಗೆ ೧೦-೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರೊಂದಿಗೆ ಮದುವೆ ಮಾಡಿಸಲು ೭ನೇಆರೋಪಿಯಾದ ಯಳಂದೂರು ನಗರದಲ್ಲಿ ವಕೀಲರು ಹಾಗೂ ನೋಟರಿ ವೃತ್ತಿ ಮಾಡುತ್ತಿರುವ ಶ್ರೀ ಕೃಷ್ಣರವರು ಆರೋಪಿ-೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೩ ವರ್ಷ ಪ್ರಾಯದ ಕು.ಸುಧಾರವರು ದಿನಾಂಕಃ ೦೮.೧೧.೧೯೯೭ರಂದು ಜನಿಸಿರುವುದಾಗಿ ಪ್ರಮಾಣ ಪತ್ರವನ್ನು ಪ್ರಮಾಣಿಕರಿಸಿಸುವ ಮೂಲಕ ಸಹಕಾರ ನೀಡಿ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸುವ ಮೂಲಕ ಆರೋಪಿ-೭ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ರ ವಿಧಿ ೧೧ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವರೆಂಬುದನ್ನು ಅಭಿಯೋಜನೆಯು ಯಾವುದೆ ಸಹಜ ಸಂಶಯಗಳಿಗೆ ಎಡೆ ಇಲ್ಲದಂತೆ ರುಜುವಾತುಪಡಿಸಿದೆಯೇ?

**ಅಂಶ-೫ :** ಯಾವ ಆದೇಶ?

೬. **ಮೇಲ್ಕಂಡ ಅಂಶಗಳಿಗೆ ನನ್ನ ನಿರ್ಣಯಗಳು ಕೆಳಗಿನಂತೆ ಇವೆ.**

**ಅಂಶ**-೧ : ಸಕಾರಾತ್ಮಕವಾಗಿ

**ಅಂಶ**–೨ : ಸಕಾರಾತ್ಮಕವಾಗಿ

**ಅಂಶ**–೩ : ನಕಾರಾತ್ಮಕವಾಗಿ

**ಅಂಶ**–೪ : ನಕಾರಾತ್ಮಕವಾಗಿ

**ಅಂಶ**–೫ : ಅಂತಿಮ ಆದೇಶದಂತೆ ಕೆಳಕಂಡ ಕಾರಣಗಳಿಗಾಗಿ

**ಕಾರಣಗಳು**

೭. **ಅಂಶ**–೧ **ಮತ್ತು** ೨ : ಈ ಎರಡೂ ಅಂಶಗಳು ಆರೋಪಿತ ಘಟನೆಯ ವಿವಿಧ ಘಟಕಾಂಶಗಳಾಗಿರುವ ಕಾರಣ ವಿಷಯದ ಪುನರುಕ್ತಿಯನ್ನು ತಪ್ಪಿಸುವ ಸಲುವಾಗಿ ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಈ ಪ್ರಕರಣದಲ್ಲಿ ಒಂದನೇ ಆರೋಪಿಯು ಬಾಲ್ಯ ವಿವಾಹವಾಗಿರುವರೆಂದೂ ಎರಡರಿಂದ ನಾಲ್ಕನೇ ಆರೋಪಿಗಳು ಬಾಲ್ಯವಿವಾಹವನ್ನು ನೆರವೇರಿಸಿರುವರೆಂದೂ ಐದು ಮತ್ತು ಎಳನೇ ಆರೋಪಿಗಳು ಬಾಲ್ಯವಿವಾಹವನ್ನು ಪ್ರೋತ್ಸಾಹಿಸಿರುವರೆಂದೂ ಅಭಿಯೋಜನೆಯು ಆಪಾದಿಸಿದೆ.

೮. ಒಂದನೇ ಆರೋಪಿಯು ಆರೋಪಿ ೨ ಮತ್ತು ೩ರವರ ಮಗನಾಗಿರುತ್ತಾರೆ. ನಾಲ್ಕನೇ ಆರೋಪಿಯು ಒಂದನೇ ಆರೋಪಿಯು ಮದುವೆಯಾಗಿರುವ ಅಪ್ರಾಪ್ತ ವಯಸ್ಕರಾದ ಕು:ಸುಧಾರವರ ತಾಯಿಯಾಗಿರುತ್ತಾರೆ. ೫ನೇ ಆರೋಪಿಯು ಶ್ರೀ ಮಹದೇಶ್ವರ ಕಲ್ಯಾಣ ಮಂಟಪದ ಮೇಲ್ವಿಚಾರಕರಾಗಿರುತ್ತಾರೆ. ೭ನೇ ಆರೋಪಿಯು ವಕೀಲ/ನೋಟರಿಯಾಗಿದ್ದು ಕು:ಸುಧಾರವರ ತಂದೆಗೆ ಪ್ರಮಾಣಪತ್ರವನ್ನು ಪ್ರಮಾಣೀಕರಿಸಿಕೊಟ್ಟವರಾಗಿರುತ್ತಾರೆ.

೯. ಆರೋಪಿ–೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ

ಸಹ ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರು ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಗ್ಗೆ ೧೦-೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಮದುವೆಯಾಗುವ ಮೂಲಕ ೧ನೇಆರೋಪಿಯು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೯ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ೧ನೇ ಆರೋಪಿಯ ವಿರುದ್ಧ ಆಪಾದನೆ ಮಾಡಲಾಗಿದೆ.

೯. ಆರೋಪಿ-೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ೧ನೇಆರೋಪಿಯ ತಂದೆಯಾದ ೨ನೇಆರೋಪಿ ಮಹದೇವ ಹಾಗೂ ೧ನೇಆರೋಪಿಯ ತಾಯಿಯಾದ ೩ನೇಆರೋಪಿ ಶ್ರೀಮತಿ ಬಸಮ್ಮ ಮತ್ತು ಕು.ಸುಧಾರವರ ತಾಯಿಯಾದ ೪ನೇಆರೋಪಿ ಶ್ರೀಮತಿ ನಾಗಮ್ಮರವರು ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಗ್ಗೆ ೧೦-೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರೊಂದಿಗೆ ಮದುವೆ ಮಾಡಿಸುವ ಮೂಲಕ ಆರೋಪಿ-೨ ರಿಂದ ೪ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೧೦ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ೨ರಿಂದ೪ನೇ ಆರೋಪಿಗಳ ವಿರುದ್ಧ ಆಪಾದನೆ ಮಾಡಲಾಗಿದೆ.

೧೧. ಆರೋಪಿ-೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿ ದಿದ್ದರೂ ಸಹ ೧ನೇಆರೋಪಿಯ ತಂದೆಯಾದ ೨ನೇಆರೋಪಿ ಮಹದೇವ ಹಾಗೂ ೧ನೇಆರೋಪಿಯ ತಾಯಿಯಾದ ೩ನೇಆರೋಪಿ ಶ್ರೀಮತಿ ಬಸಮ್ಮ ಮತ್ತು ಕು.ಸುಧಾರವರ ತಾಯಿಯಾದ ೪ನೇಆರೋಪಿ ಶ್ರೀಮತಿ ನಾಗಮ್ಮ ಹಾಗೂ ೧ನೇಆರೋಪಿಯೊಂದಿಗೆ ಸಹಕರಿಸಿ ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಿಗ್ಗೆ ೧೦-೩೦ ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರೊಂದಿಗೆ ಮದುವೆ ಮಾಡಿಸಲು ಸದರಿ ಕಲ್ಯಾಣ ಮಂಟಪದ ವ್ಯವಸ್ಥಾಪಕರಾದ ೫ನೇಆರೋಪಿಯಾದ ಶ್ರೀ ಸೋಮಣ್ಣರವರು ಸಹಕಾರ ನೀಡಿ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸುವ ಮೂಲಕ ಆರೋಪಿ-೫ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೧೧ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ೫ನೇ ಆರೋಪಿಯ ವಿರುದ್ಧ ಆಪಾದನೆ ಮಾಡಲಾಗಿದೆ.

೧೨. ೪ನೇಆರೋಪಿಯ ಮಗಳಾದ ಕು. ಸುಧಾರವರು ಅಪ್ರಾಪ್ತ ವಯಸ್ಕರು ಎಂದು ತಿಳಿದಿದ್ದರೂ ಸಹ ೧ನೇಆರೋಪಿಯ ತಂದೆಯಾದ ೨ನೇಆರೋಪಿ ಮಹದೇವ ಹಾಗೂ ೧ನೇಆರೋಪಿಯ ತಾಯಿಯಾದ ೩ನೇಆರೋಪಿ ಶ್ರೀಮತಿ ಬಸಮ್ಮ ಮತ್ತು ಕು.ಸುಧಾರವರ ತಾಯಿಯಾದ ೪ನೇಆರೋಪಿ ಶ್ರೀಮತಿ ನಾಗಮ್ಮರವರು ಕೊಳ್ಳೇಗಾಲ ತಾಲೂಕು, ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ ವ್ಯಾಪಿಯಲ್ಲಿರುವ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕಃ ೦೨.೦೫.೨೦೧೬ರಂದು ಬೆಳಿಗ್ಗೆ ೧೦-೩೦

ಘಂಟೆ ಸಮಯದಲ್ಲಿ ಕು.ಸುಧಾರವರನ್ನು ಸುಮಾರು ೨೪ ವರ್ಷ ಪ್ರಾಯದ ೧ನೇಆರೋಪಿಯಾದ ಮಹೇಶ ಅಃ ಮಹದೇವಸ್ವಾಮಿಯವರೊಂದಿಗೆ ಮದುವೆ ಮಾಡಿಸಲು ೭ನೇಆರೋಪಿಯಾದ ಯಳಂದೂರು ನಗರದಲ್ಲಿ ವಕೀಲರು ಹಾಗೂ ನೋಟರಿ ವೃತ್ತಿ ಮಾಡುತ್ತಿರುವ ಶ್ರೀ ಕೃಷ್ಣರವರು ಆರೋಪಿ–೪ ಶ್ರೀಮತಿ ನಾಗಮ್ಮರವರ ಮಗಳಾದ ಸುಮಾರು ೧೬ ವರ್ಷ ಪ್ರಾಯದ ಕು.ಸುಧಾರವರು ದಿನಾಂಕಃ ೦೮.೧೧.೧೯೯೭ರಂದು ಜನಿಸಿರುವುದಾಗಿ ಪ್ರಮಾಣ ಪತ್ರವನ್ನು ಪ್ರಮಾಣೀಕರಿಸಿಸುವ ಮೂಲಕ ಸಹಕಾರ ನೀಡಿ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸುವ ಮೂಲಕ ಆರೋಪಿ–೭ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ ರ ವಿಧಿ ೧೧ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ೭ನೇ ಆರೋಪಿಯ ವಿರುದ್ಧ ಆಪಾದನೆ ಮಾಡಲಾಗಿದೆ.

೧೩.ಅಭಿಯೋಜನೆಯು ಕೆಳಕಂಡ ಅಂಶಗಳನ್ನು ರುಜುವಾತುಗೊಳಿಸುವ ಹೊಣೆಗಾರಿಕೆ ಹೊಂದಿದೆ:

೧. ೪ನೇ ಆರೋಪಿ ನಾಗಮ್ಮರವರ ಮಗಳಾದ ಕು.ಸುಧಾರವರು ಆರೋಪಿತ ಮದುವೆಯ ದಿನಾಂಕ:೦೨.೦೫.೨೦೧೬ರಂದು ಅಪ್ರಾಪ್ತ ವಯಸ್ಕರಾಗಿದ್ದರು;

೨. ೧ನೇ ಆರೋಪಿ ಶ್ರೀ ಎಂ.ಮಹದೇವಸ್ವಾಮಿಯವರು ಆರೋಪಿತ ಮದುವೆಯ ದಿನಾಂಕ:೦೨.೦೫.೨೦೧೬ರಂದು ೧೮ ವರ್ಷಕ್ಕೆ ಮೇಲ್ಪಟ್ಟ ವಯಸ್ಕರಾಗಿದ್ದರು;

೩. ಆರೋಪಿ–೧ರವರು ಕು.ಸುಧಾರವರು ಅಪ್ರಾಪ್ತ ವಯಸ್ಕರಾಗಿದ್ದರು ಎಂಬ ಸಂಗತಿ ತಿಳಿದಿದ್ದರೂ ಸಹ ದಿ.೦೨.೦೫.೧೬ರಂದು ಕು.ಸುಧಾರವರೊಂದಿಗೆ ಮದುವೆ ಯಾಗಿರುತ್ತಾರೆ;

೪. ಆರೋಪಿ೨ ರಿಂದ ೪ರವರು ಕು.ಸುಧಾರವರು ಅಪ್ರಾಪ್ತ ವಯಸ್ಕರಾಗಿದ್ದರು ಎಂಬ ಸಂಗತಿ ತಿಳಿದಿದ್ದರೂ ಸಹ

ದಿ.೦೨.೦೫.೧೬ರಂದು ೧ನೇ ಆರೋಪಿಯೊಂದಿಗೆ ಕು.ಸುಧಾರವರ ಮದುವೆಯನ್ನು ನೆರವೇರಿಸಿರುತ್ತಾರೆ;

೫. ಆರೋಪಿ೫–ಶ್ರೀ ಸೋಮಣ್ಣರವರು ಕು.ಸುಧಾರವರು ಅಪ್ರಾಪ್ತ ವಯಸ್ಕರೆಂದು ತಿಳಿದಿದ್ದರೂ ಸಹ ೧ನೇ ಆರೋಪಿ ಶ್ರೀ ಎಂ.ಮಹದೇವಸ್ವಾಮಿಯವರು ಕು.ಸುಧಾರವರೊಂದಿಗೆ ಮದುವೆಯಾಗಲು ತಮ್ಮ ಕಲ್ಯಾಣ ಮಂಟಪದಲ್ಲಿ ಅವಕಾಶ ನೀಡುವ ಮೂಲಕ ಬಾಲ್ಯ ವಿವಾಹಕ್ಕೆ ಪ್ರೋತ್ಸಾಹ ನೀಡಿರುತ್ತಾರೆ;

೬. ಆರೋಪಿ೭–ಶ್ರೀ ಕೃಷ್ಣರವರು ಕು.ಸುಧಾರವರು ಅಪ್ರಾಪ್ತ ವಯಸ್ಕರೆಂದು ತಿಳಿದಿದ್ದರೂ ಸಹ ೧ನೇ ಆರೋಪಿ ಶ್ರೀ ಎಂ.ಮಹದೇವಸ್ವಾಮಿಯವರು ಕು.ಸುಧಾರವರೊಂದಿಗೆ ಮದುವೆಯಾಗಲು ಸಹಾಯಕವಾಗುವಂತೆ ನಿಪಿ೪ರಂತೆ ಪ್ರಮಾಣ ಪತ್ರವನ್ನು ಪ್ರಮಾಣೀಕರಿಸಿ ಕೊಡುವ ಮೂಲಕ ಬಾಲ್ಯ ವಿವಾಹಕ್ಕೆ ಪ್ರೋತ್ಸಾಹ ನೀಡಿರುತ್ತಾರೆ.

೧೪. ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಪ್ರಾಸಾ೧ರಿಂದ ಪ್ರಾಸಾ೬ರವರನ್ನು ವಿಚಾರಣೆಗೊಳಪಡಿಸಿ ನಿಪಿ೧ರಿಂದ ನಿಪಿ೯ನ್ನು ಪ್ರದರ್ಶಿಸಿದೆ.

೧೫. ಪ್ರಾಸಾ೧ ಶ್ರೀ ಶೇಷಾದ್ರಿಯವರು ಶಿಶು ಅಭಿವೃದ್ಧಿ ಅಧಿಕಾರಿಯಾಗಿದ್ದು ಬಾಲ್ಯ ವಿವಾಹ ನಿಷೇಧಾಧಿಕಾರಿಯಾಗಿರುತ್ತಾರೆ. ಪ್ರಾಸಾ೧ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ : ೦೨.೦೫.೨೦೧೬ ರಂದು ನಾನು ಕಛೇರಿಯಲ್ಲಿ ಇರುವಾಗ ಮಹಿಳಾ ಸಹಾಯವಾಣಿಯಿಂದ ನನಗೆ ಬಂದ ಮಾಹಿತಿ ಏನೆಂದರೆ, ಯರಿಯೂರು ಗ್ರಾಮದ ಸುಧಾ ಎಂಬ ಅಪ್ರಾಪ್ತ ವಯಸ್ಕ ಬಾಲಕಿಯ ಮದುವೆಯನ್ನು ಕೊಳ್ಳೇಗಾಲ ಪಟ್ಟಣದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಸುತ್ತಿರುವುದಾಗಿ ತಿಳಿಯಿತು. ನಾನು

ಕೂಡಲೇ ಸಾಂತ್ವನ ಕೇಂದ್ರದ ಸಿಬ್ಬಂದಿಗಳಾದ ಚಾಸಾ ೨ ರಿಂದ ೪ ರವರನ್ನು ಕರೆದುಕೊಂಡು ಕೊಳ್ಳೇಗಾಲ ಪಟ್ಟಣದ ಮಹದೇಶ್ವರ ಕಲ್ಯಾಣ ಮಂಟಪಕ್ಕೆ ಹೋದೆ. ನಮ್ಮ ಜೊತೆ ಕೊಳ್ಳೇಗಾಲ ಪಟ್ಟಣ ಠಾಣೆಯ ಪಿಎಸ್ಐರವರನ್ನು ಸಹಾ ಕರೆದುಕೊಂಡು ಹೋಗಿದ್ದೆ. ಅಲ್ಲಿ ಮದುವೆ ಕಾರ್ಯಕ್ರಮ ನಡೆಯುತ್ತಿತ್ತು ನಾನು ವಧು-ವರರ ಬಗ್ಗೆ ವಿಚಾರಣೆ ಮಾಡಿದೆ. ಚಾಸಾ೪ರವರು ಹುಡುಗಿಯ ತಾಯಿಯನ್ನು ವಿಚಾರಿಸುತ್ತಿದ್ದರು. ನಾನು ವಿಚಾರಣೆ ಮಾಡಿದೆ. ಮದುವೆಯ ಹುಡುಗಿಗೆ ಪ್ರಾಪ್ತ ವಯಸ್ಸು ಆಗಿಲ್ಲ ಎಂದು ಹೇಳಿದೆ. ಆಗ ಹುಡುಗಿಯ ತಾಯಿ ತಮ್ಮ ಬಳಿ ತಮ್ಮ ಮಗಳ ವಯಸ್ಸಿನ ದೃಢೀಕರಣ ಪತ್ರ ಇರುವುದಾಗಿ ತಿಳಿಸಿದರು ಎಂದು ನುಡಿದಿರುತ್ತಾರೆ. ಪ್ರಾಸಾ೧ರವರು ಮುಂದುವರೆದು ಹುಡುಗಿಯ ಕಡೆಯವರು ಬಂದು ಒಂದು ಪ್ರಮಾಣ ಪತ್ರವನ್ನು ತೋರಿಸಿದರು. ನನಗೆ ಆ ಪ್ರಮಾಣ ಪತ್ರದಲ್ಲಿ ನಮೂದಿಸಿದ ವಯಸ್ಸಿನ ಬಗ್ಗೆ ಅನುಮಾನ ಬಂದು ಯರಿಯೂರು ಪ್ರಾಥಮಿಕ ಶಾಲೆಗೆ ಮಾಹಿತಿ ಪಡೆದುಕೊಳ್ಳಲು ಸಾಂತ್ವನ ಕೇಂದ್ರದ ಸಿಬ್ಬಂದಿಯನ್ನು ಕಳುಹಿಸಿದೆ. ನಮ್ಮ ಸಿಬ್ಬಂದಿ ಯರಿಯೂರು ಪ್ರಾಥಮಿಕ ಶಾಲೆಯಿಂದ ಶಾಲಾ ದೃಡೀಕರಣ ಪತ್ರವನ್ನು ತಂದರು ಅದರಲ್ಲಿ ಬಾಲಕಿ ಸುಧಾರವರ ವಯಸ್ಸನ್ನು ಗಮನಿಸಿದಾಗ ಆ ಬಾಲಕಿಗೆ ೧೮ ವರ್ಷ ವಯಸ್ಸಾಗಿಲ್ಲ ಎಂದು ಖಾತರಿಯಾಯಿತು. ಈ ಬಗ್ಗೆ ಕ್ರಮ ಜರುಗಿಸುವಂತೆ ನಾನು ಪೋಲೀಸರಿಗೆ ತಿಳಿಸಿದೆ. ಪೋಲೀಸರು ನಿಪಿ೧ರಂತೆ ಮಹಜರ್ ಮಾಡಿದರೆಂದು ನುಡಿದಿರುತ್ತಾರೆ.

೧೬. ಪ್ರಾಸಾ-೧ರವರು ಮುಂದುವರೆದು ನನ್ನ ಸಿಬ್ಬಂದಿ ಯರಿಯೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿಂದ ಆರ್ ಸುಧಾರವರ ವಯಸ್ಸಿನ ಬಗ್ಗೆ ಶಾಲಾ ದಾಖಲಾತಿ ದೃಡೀಕರಣ ಪತ್ರವನ್ನು ತಂದರು. ಸದರಿ ಶಾಲಾ ದಾಖಲಾತಿ ದೃಡೀಕರಣ ಪತ್ರವನ್ನು ಪರಿಶೀಲಿಸಿದಾಗ ಆರ್ ಸುಧಾ ರವರ ಜನ್ಮ ದಿನಾಂಕ : ೦೮.೦೧.೨೦೦೦ ಎಂದು ಇತ್ತು. ಆದ ಕಾರಣ ಆರ್ ಸುಧಾ ಅಪ್ರಾಪ್ತ

ವಯಸ್ಕರಾಗಿರುತ್ತಾರೆ ಎಂದು ತಿಳಿಯಿತು. ಆಗ ಚಾಸಾ ೬ರವರಿಗೆ ಮುಂದಿನ ಕ್ರಮ ಜರುಗಿಸುವಂತೆ ಕೇಳಿದೆ. ಚಾಸಾ ೬ ಕೂಲಂಕಷವಾಗಿ ವಿಚಾರಣೆ ಮಾಡಿ, ನಿಪಿಃ ೧ ಮಹಜರ್ ಅನ್ನು ಬರೆದರು. ಮಹಜರ್ ಸಮಯದಲ್ಲಿ ಪೊಲೀಸರು ಆರ್ ಸುಧಾರವರು ನೀಡಿದ ವಯಸ್ಸಿನ ದೃಢೀಕರಣ ಪತ್ರವನ್ನು ಜಪ್ತು ಮಾಡಿದರು. ಆರ್ ಸುಧಾರವರ ಶಾಲಾ ದಾಖಲಾತಿಯ ದೃಢೀಕರಣ ಪತ್ರ **ನಿಪಿ–೩**ನ್ನು, ಸುಧಾ ರವರ ತಾಯಿ ಹಾಜರು ಮಾಡಿದ ವಯಸ್ಸಿನ ದೃಢೀಕರಣ ಪತ್ರ ನಿಪಿ–೪ನ್ನು ಮತ್ತು ಮದುವೆಯ ನಿಪಿ–೪ನ್ನು ಮದುವೆಯ ಕರೆಯೋಲೆಯನ್ನು ನಿಪಿ–೫ನ್ನು ಗುರುತಿಸಿ ತಾವು ನಿಪಿ೨ರಂತೆ ದೂರು ನೀಡಿರುವುದಾಗಿ ನುಡಿದು ಆರೋಪಿ೨, ೪ ಮತ್ತು ೫ರವರನ್ನು ಗುರುತಿಸಿದ್ದಾರೆ.

೧೭. ಪ್ರಾಸಾ೧ರವರು ಆರೋಪಿಗಳ ಪರ ಪಾಟೀ ಸವಾಲಿನಲ್ಲಿ ಮಹಾದೇಶ್ವರ ಕಲ್ಯಾಣ ಮಂಟಪಕ್ಕೆ ನನ್ನ ಜೊತೆ ಚಾಸಾ ೨ ಮತ್ತು ೩ ಬಂದಿದ್ದರು. ನಾನು ಕಲ್ಯಾಣಮಂಟಪಕ್ಕೆ ಹೋಗುವ ಮೊದಲು ನಾನು ಯಾವುದೇ ದಾಖಲೆ ತೆಗೆದುಕೊಂಡಿಲ್ಲ. ನನ್ನ ಸಿಬ್ಬಂದಿ ಮಹಿಳಾ ಸಹಾಯವಾಣಿಯಿಂದ ಕರೆ ಬಂದಿದೆ ಎಂದು ತಿಳಿಸಿದರು. ಅವರು ನನ್ನ ಜೊತೆ ಬಂದಿದ್ದರು. ನಿಪಿಃ ೫ನ್ನು ಚಾಸಾ ೩ರವರು ನನಗೆ ಕೊಟ್ಟರು ನಾನು ಅದನ್ನು ಚಾಸಾ ೬ರವರಿಗೆ ಕೊಟ್ಟೆ. ಚಾಸಾ ೩ರವರನ್ನು ನನ್ನ ಕಛೇರಿಗೆ ಕರೆಸಿದ್ದೆ ಆಗ ಅವರು ದೂರು ಬಂದಿರುವುದಾಗಿ ತಿಳಿಸಿ ನಿಪಿಃ ೫ ನ್ನು ತೋರಿಸಿದರು. ಆಗ ಸಮಯ ಸುಮಾರು ೧೦.೧೫ ಗಂಟೆ ಆಗಿತ್ತು. ನಮ್ಮ ಸಾಂತ್ವನ ಕೇಂದ್ರಕ್ಕೆ ಯಾರಾದರೂ ಬಾಲ್ಯ ವಿವಾಹದ ಬಗ್ಗೆ ದೂರು ಕೊಟ್ಟಿರುತ್ತಾರೆ ಆ ದೂರಿನೊಂದಿಗೆ ಮದುವೆ ಕರೆಯೋಲೆ ಸಹಾ ಕೊಟ್ಟಿರುತ್ತಾರೆ. ದೂರು ಬಂದ ನಂತರ ನಾವು ಮದುವೆ ನಡೆಯುತ್ತಿರುವ ಛತ್ರಕ್ಕೆ ಹೋಗಿ ತನಿಖೆ ಮಾಡುತ್ತೇವೆ. ನಾನು ಪೊಲೀಸರನ್ನು ನನ್ನ ಜೊತೆ ಛತ್ರಕ್ಕೆ ಕರೆದುಕೊಂಡು ಹೋದೆ. ನಾವು ಛತ್ರಕ್ಕೆ ಹೋದ ಕೂಡಲೇ

ಅಲ್ಲಿದ್ದ ವ್ಯಕ್ತಿಗಳನ್ನು ವಿಚಾರಣೆ ಮಾಡಿದೆ. ಚಾಸಾ ೯ರವರು ನನ್ನ ಸಮಕ್ಷಮ ವಿಚಾರಣೆ ಮಾಡಿದರು. ನಿಪಿಃ ೫ ರಲ್ಲಿ ನಮೂದಿಸಿರುವ ವ್ಯಕ್ತಿಗಳನ್ನು ಆರೋಪಿತ ಘಟನೆಗೆ ಮೊದಲು ನೋಡಿರುವುದಿಲ್ಲ. ನಿಪಿಃ ೪ನ್ನು ಸುಧಾರವರ ತಾಯಿ ಚಾಸಾ ೯ರವರಿಗೆ ಕೊಟ್ಟರು. ನಾನು ಛತ್ರಕ್ಕೆ ಹೋಗುವ ಮೊದಲು ನಿಪಿಃ ೪ನ್ನು ನೋಡಿರಲಿಲ್ಲ. ನಮ್ಮ ಇಲಾಖೆಗೆ ಯಾವುದಾದರೂ ವ್ಯಕ್ತಿ ದೂರು ಕೊಟ್ಟರೆ ಆ ದೂರು ಹಾಗೂ ಅದರೊಂದಿಗೆ ಹಾಜರುಪಡಿಸಿದ ದಾಖಲೆಗಳನ್ನು ಕಡತದೊಂದಿಗೆ ನಮೂದಿಸಿಕೊಳ್ಳುತ್ತೇವೆ. ಯರಿಯೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನಮ್ಮ ಸಿಬ್ಬಂದಿ ಹೋಗಿ ನೇರವಾಗಿ ನಿಪಿಃ ೩ ದಾಖಲೆಯನ್ನು ತಂದಿರುತ್ತಾರೆ. ಚಾಸಾ ೨ ಮತ್ತು ೩ ಇಬ್ಬರೂ ಸಹಾ ಶಾಲೆಗೆ ಹೋಗಿ ತಂದಿರುತ್ತಾರೆ. ಅಂದಾಜು ೧೨.೩೦ ಗಂಟೆಗೆ ತಂದು ಕೊಟ್ಟಿರುತ್ತಾರೆ. ನನಗೆ ದೂರವಾಣಿಯಲ್ಲಿ ಸುಧಾ ಎಂಬ ಹುಡುಗಿಯ ಮದುವೆಯಾಗುತ್ತಿದೆ ಎಂಬ ಮಾಹಿತಿ ಬಂದಿದ್ದ ಕಾರಣ ಚಾಸಾ ೨ ಮತ್ತು ೩ರವರಿಗೆ ಸುಧಾರವರ ಶಾಲಾ ದೃಡೀಕರಣ ಪತ್ರ ತರುವಂತೆ ಹೇಳಿ ಕಳುಹಿಸಿದೆ ಎಂದು ನುಡಿದಿರುತ್ತಾರೆ.

೧೮. ಪ್ರಾಸಾ೧ರವರು ಮುಂದುವರೆದು ನಾನು ನಿಪಿಃ ೩ನ್ನು ಸ್ವೀಕರಿಸಿ, ಅದರಲ್ಲಿರುವ ಜನ್ಮ ದಿನಾಂಕವನ್ನು ಮಾತ್ರ ಗಮನಿಸಿದೆ. ತಂದೆ/ತಾಯಿ/ಪೋಷಕರು–ರಾಜು ಈ ವಿವರವನ್ನು ಗಮನಿಸಿರುವುದಿಲ್ಲ. ನಿಪಿಃ ೨ನ್ನು ನನ್ನ ಸಿಬ್ಬಂದಿ ಬರೆದಿರುತ್ತಾರೆ. ನಾನು ರುಜು ಮಾಡಿಕೊಟ್ಟಿರುತ್ತೇನೆ. ನಿಪಿಃ ೨ನ್ನು ಪೊಲೀಸ್ ಠಾಣೆಯಲ್ಲಿ ಕೊಟ್ಟಿರುತ್ತೇನೆ. ನಿಖರವಾದ ಸಮಯ ನೆನಪಿಲ್ಲ. ವಧು ಹಾಗೂ ವರನನ್ನು ನಾನು ವಿಚಾರಿಸಿರುವುದಿಲ್ಲ. ನಿಪಿಃ ೨ನ್ನು ಬರೆಯಲು ನಾನು ನನ್ನ ಸಿಬ್ಬಂದಿಗೆ ಸೂಚನೆಗಳನ್ನು ಕೊಟ್ಟಿರುತ್ತೇನೆ. ನಾನು ಹಾಗೂ ಚಾಸಾ ೯ ತನಿಖೆ ಮಾಡುವಾಗ ನನ್ನ ಸಿಬ್ಬಂದಿ ಸಹಾ ನನ್ನ ಜೊತೆ ಇದ್ದರು ಆ ಸಂಗತಿಗಳನ್ನೆಲ್ಲಾ ಕ್ರೂಡೀಕರಿಸಿ ದೂರು ಬರೆಯಲು ನನ್ನ

ಸಿಬ್ಬಂದಿಗೆ ಹೇಳಿರುತ್ತೇನೆ. ನಮ್ಮ ಬಳಿ ಇರುವ ಎಲ್ಲಾ ದಾಖಲೆಗಳನ್ನು ಚಾಸಾ ೯ರವರಿಗೆ ಕೊಡುವಂತೆ ನಾನು ಸಾಂತ್ವನ ಸಿಬ್ಬಂದಿಗೆ ತಿಳಿಸಿರುತ್ತೇನೆ. ಅಲ್ಲಿದ್ದ ಸಾರ್ವಜನಿಕರನ್ನು ನಾನು ಪ್ರತ್ಯೇಕವಾಗಿ ವಿಚಾರಣೆ ಮಾಡಲಿಲ್ಲ. ನಿಪಿಃ ೩, ೪ ಮತ್ತು ನಿಪಿಃ ೫ ದಾಖಲೆಗಳಿಗೂ ಆರೋಪಿಗಳಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ವಿಷಯವನ್ನು ತಿಳಿದುಕೊಳ್ಳದೇ ತಪ್ಪು ಗ್ರಹಿಕೆಯಿಂದ ದೂರು ಕೊಟ್ಟಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಿಪಿಃ ೧ ರಲ್ಲಿ ತಿಳಿಸಿರುವಂತೆ ಯಾವುದೇ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿರುವು ದಿಲ್ಲ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

೧೯. ಪ್ರಾಸಾಗರವರು ಮುಂದುವರೆದು ಸಾಧಾರಣವಾಗಿ ನಮ್ಮ ಕರ್ತವ್ಯದ ಬಗ್ಗೆ ದಿನಚರಿಯನ್ನು ಬರೆಯುತ್ತೇವೆ. ಮಾಹಿತಿ ಬಂದ ಸಂದರ್ಭದಲ್ಲಿ ವಧು ಹಾಗೂ ವರನ ವಿಳಾಸವನ್ನು ಕೇಳುತ್ತೇವೆ ಆದರೆ ನಮಗೆ ದೂರವಾಣಿಯಲ್ಲಿ ಮಾಹಿತಿ ವಿವರವಾಗಿ ಬಂದಿರುವುದಿಲ್ಲ. ನನಗೆ ಮಾಹಿತಿ ದೊರಕಿದ ಕೂಡಲೇ ಅಂದಾಜು ಅರ್ಧ ಗಂಟೆಯಲ್ಲಿ ಸ್ಥಳಕ್ಕೆ ದಾವಿಸಿರುತ್ತೇನೆ. ನಾನು ಕಲ್ಯಾಣಮಂಟಪಕ್ಕೆ ಹೋದಾಗ ಜನಜಂಗುಳಿ ಇತ್ತು, ಯಾವ ದೇವತಾ ಕಾರ್ಯ ನಡೆಯುತ್ತಿತ್ತು ಎಂದು ನೋಡಿರುವುದಿಲ್ಲ. ನಾನು ಕಲ್ಯಾಣ ಮಂಟಪದ ಹೊರಗೆ ಹೂವಿನ ಅಲಂಕಾರ ಮಾಡಿದ್ದರೇ ಇಲ್ಲವೇ ನೋಡಿರುವುದಿಲ್ಲ. ಕಲ್ಯಾಣ ಮಂಟಪದಲ್ಲಿದ್ದ ಎಲ್ಲಾ ಜನರ ವಿವರಗಳನ್ನು ಪಡೆದುಕೊಂಡಿರುವುದಿಲ್ಲ. ಕಲ್ಯಾಣಮಂಟಪವನ್ನು ಯಾರು ಬುಕ್ ಮಾಡಿದ್ದರು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಸಂಬಂಧಿಸಿದ ರಶೀದಿಯನ್ನು ನಾನು ಪಡೆದುಕೊಂಡಿಲ್ಲ. ೫ನೇ ಆರೋಪಿ ಕಲ್ಯಾಣಮಂಟ ಪ ದ ಮ್ಯಾನೇಜರ್ ಆಗಿರುವ ಬಗ್ಗೆ ದಾಖಲೆಗಳನ್ನು ನಾನು ಪಡೆದುಕೊಂಡಿಲ್ಲ. ನಾನು ಕಲ್ಯಾಣಮಂಟಪದ ಬುಕಿಂಗ್ ರಿಜಿಸ್ಟರ್ ಅನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

೨೦. ಪ್ರಾಸಾ೧ರವರು ಮುಂದುವರೆದು ವಧು–ವರರ ಮತಪದ್ಧತಿ ಯಾವುದು ಎಂದು ತಿಳಿದುಕೊಂಡಿರುವುದಿಲ್ಲ. ೫ನೇ ಆರೋಪಿ ಸೋಮಣ್ಣರವರಿಂದ ನಾನು ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಾವು ಯಾವುದೇ ಬಾಲ್ಯ ವಿವಾಹ ತಡೆ ಕಾರ್ಯಾಚರಣೆ ನಡೆಸಿದಾಗ ಫೋಟೋ ಹಾಗೂ ವಿಡಿಯೋ ಚಿತ್ರೀಕರಣ ಮಾಡುತ್ತೇವೆ ಎಂದರೆ ಕೆಲವೊಮ್ಮೆ ಮಾಡುತ್ತೇವೆ. ವಧುವರರ ಕಡೆಯ ಕುಲಸ್ಥರನ್ನು, ಯಜಮಾನರುಗಳನ್ನು ವಿಚಾರಣೆ ಮಾಡಲು ಸಾಧ್ಯವಾಗಿರುವುದಿಲ್ಲ. ನನ್ನ ದೂರಿನಲ್ಲಿ ಘಟನೆಗಳು ನಡೆದ ಸಮಯಗಳನ್ನು ಅನುಕ್ರಮವಾಗಿ ನಮೂದು ಮಾಡಿರುವುದಿಲ್ಲ. ನಿಪಿಃ ೩ ರಲ್ಲಿ ಯಾವುದೆ ವ್ಯಕ್ತಿಯ ಫೋಟೋ ಇಲ್ಲ ಎಂದರೆ ಸರಿ. ೨ನೇ ಆರೋಪಿ ಚಾಸಾ ೬ರವರಿಗೆ ನೀಡಿದ ಡಿಎಲ್ ಅನ್ನು ನಾನು ಪರಿಶೀಲನೆ ಮಾಡಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಿರುವಂತೆ ಸುಧಾ ಹಾಗೂ ಮಹಾದೇವಸ್ವಾಮಿಯವರ ನಡುವೆ ಮದುವೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ೫ನೇ ಆರೋಪಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮಹಜರ್ ಅನ್ನು ಚಾಸಾ ೬ರವರು ಮಾಡಿರುತ್ತಾರೆ. ನಿಪಿಃ ೧ನ್ನು ನಾನು ಹೇಳಿ ಬರೆಸಿಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ, ಸುಳ್ಳು ದೂರನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ೫ನೇ ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

೨೧. ಪ್ರಾಸಾ೧ರವರು ಮುಂದುವರೆದು ಮೇ ತಿಂಗಳಿನಲ್ಲಿ ಶಾಲೆಗಳಿಗೆ ರಜೆ ಇರುತ್ತದೆ ಎಂದರೆ ಸರಿ. ಆರ್ ಸುಧಾರವರ ಜನನ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದುಕೊಂಡಿಲ್ಲ. ಸುಧಾರವರ ತಾಯಿಯವರು ಜನ್ಮ ಪ್ರಮಾಣ ಪತ್ರ ಇರುವುದಿಲ್ಲ ಎಂದು ತಿಳಿಸಿದರು. ಆರ್ ಸುಧಾರವರೇ ನಿಪಿಃ ೩ ರಲ್ಲಿ ಕಾಣಿಸಿರುವ ಆರ್ ಸುಧಾ ಎಂಬ ಬಗ್ಗೆ ಪ್ರತ್ಯೇಕ

ದೃಡೀಕರಣ ಪತ್ರ ಇರುವುದಿಲ್ಲ. ರಂಗಶೆಟ್ಟಿಯವರ ಮಗ ರಾಜು ಎನ್ನುವವರ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಸಂಗ್ರಹಿಸಿರುವುದಿಲ್ಲ. ರಂಗಶೆಟ್ಟಿಯವರ ಮಗ ರಾಜುರವರಿಗೆ ಆರ್ ಸುಧಾ ಎಂಬ ಮಗಳು ಇರುತ್ತಾರೆ ಎಂಬ ಬಗ್ಗೆ ದಾಖಲೆಗಳನ್ನು ನಾನು ಸಂಗ್ರಹಿಸಿರುವುದಿಲ್ಲ. ನಿಪಿಃ ೪ ರಲ್ಲಿ ರಂಗಶೆಟ್ಟಿಯವರ ಮಗ ರಾಜು ತಮ್ಮ ಮಗಳು ಆರ್ ಸುಧಾಳ ಮದುವೆಯ ಸಲುವಾಗಿ ಜನ್ಮ ದಿನಾಂಕವನ್ನು ಪ್ರಮಾಣೀಕರಿಸುತ್ತಿರುವುದಾಗಿ ತಿಳಿಸಿರುವುದಿಲ್ಲ. ನಿಪಿಃ ೪ ರಲ್ಲಿ ನಮೂದಿಸಿರುವ ಅಂಶಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನಿಪಿಃ ೩ನ್ನು ಹೊರತುಪಡಿಸಿ, ಆರ್ ಸುಧಾರವರು ದಿನಾಂಕ : ೦೮.೦೧.೨೦೦೦ ರಂದು ಜನಿಸಿರುತ್ತಾರೆ ಎಂಬ ಬಗ್ಗೆ ಬೇರೆ ದಾಖಲೆಗಳು ಇರುವುದಿಲ್ಲ ಎಂದು ನುಡಿದಿರುತ್ತಾರೆ.

೨೨. ಪ್ರಾಸಾಗರವರು ಮುಂದುವರೆದು ನನಗೆ ದೂರವಾಣಿಯ ಮೂಲಕ ಮಾಹಿತಿ ಬಂದ ಕಾರಣ ಆ ಮಾಹಿತಿಯನ್ನು ನನ್ನ ಕಛೇರಿಯಲ್ಲಿ ನಮೂದಿಸಿರುವುದಿಲ್ಲ. ಈ ವಿವರಗಳನ್ನು ನಮ್ಮ ಅಂಗ ಸಂಸ್ಥೆ ಸಾಂತ್ವನ ಕೇಂದ್ರದಲ್ಲಿ ದಾಖಲಿಸಿಕೊಂಡಿರುತ್ತಾರೆ. ನಿಪಿಃ ೪ ರಲ್ಲಿ ಆರ್ ಸುಧಾರವರು ಯಾವ ತರಗತಿಯಲ್ಲಿ ಓದುತ್ತಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ. ನಿಪಿಃ ೩ನ್ನು ಯರಿಯೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯವರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಸಲುವಾಗಿ ನಿಪಿಃ ೩ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.  ೭ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಸೂಚಿಸುವುದು ಸರಿಯಲ್ಲ. ೭ನೇ ಆರೋಪಿ ಆರ್ ಸುಧಾರವರ ವಯಸ್ಸಿಗೆ ಸಂಬಂಧಿಸಿದಂತೆ ದೃಡೀಕರಣ ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರ್ ಸುಧಾ ಹಾಗೂ ೧ನೇ ಆರೋಪಿಯ ನಡುವೆ ದಿನಾಂಕ : ೦೨.೦೫.೨೦೧೬ ರಂದು ಮದುವೆಯಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸಾಂತ್ವನ ಕೇಂದ್ರದವರು ನೀಡಿದ ಸುಳ್ಳು ಮಾಹಿತಿ

ಆಧಾರದ ಮೇಲೆ ನಾನು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸುಳ್ಳು. ನಿಪಿಃ ೪ನ್ನು ನಿಪಿಃ ೧ ಮಹಜರ್‌ನಂತೆ ಅಮಾನತ್ತು ಪಡಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದು ಸೂಚಿಸುವುದು ಸುಳ್ಳು. ನಿಪಿಃ ೩ನ್ನು ಪಡೆದುಕೊಳ್ಳಲು ಲಿಖಿತ ಪತ್ರವ್ಯವಹಾರ ಮಾಡಿರುವುದಿಲ್ಲ ನೇರವಾಗಿ ನಮ್ಮ ಸಿಬ್ಬಂದಿ ಮೂಲಕ ಪಡೆದುಕೊಂಡಿರುತ್ತೇನೆ. ಸಿಬ್ಬಂದಿಗೆ ಲಿಖಿತ ಆದೇಶ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ.

೨೩. **ಫ್ರಾಸಾ-೪ ಶ್ರೀ ಆನಂದ ಎನ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ**, ದಿನಾಂಕ ಃ ೦೨.೦೫.೨೦೧೬ ರಂದು ಮಧ್ಯಾಹ್ನ ೧.೩೦ ಗಂಟೆಗೆ ಈ ಪ್ರಕರಣದ ಪಿರ್ಯಾದಿ ಶ್ರೀ ಶೇಷಾದ್ರಿ, ಸಿಡಿಪಿಒ ರವರು ಠಾಣೆಗೆ ಹಾಜರಾಗಿ ನೀಡಿದ ಪಿರ್ಯಾದು ನಿಪಿಃ ೨ನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ ೬೬/೨೦೧೬ ರಂತೆ ಪ್ರಕರಣವನ್ನು ನೋಂದಾಯಿಸಿ, ಪ್ರ ವ ವರದಿ **ನಿಪಿ–೬**ನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ಸಲ್ಲಿಸಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ನಾನು, ನನ್ನ ಸಿಬ್ಬಂದಿಗಳೊಂದಿಗೆ ತೆರಳಿ ಸಾಕ್ಷಿದಾರರಾದ ರವೀಂದ್ರ ಹಾಗೂ ಗಿರೀಶ್‌ರವರು ಪಂಚಾಯತ್‌ದಾರರಾಗಿ ಹಾಜರಿದ್ದ ಮೇರೆಗೆ ಮಧ್ಯಾಹ್ನ ೨.೧೦ ರಿಂದ ೩.೦೦ ಗಂಟೆಯವರಗೆ ನಿಪಿಃ ೧ ರಂತೆ ಕೃತ್ಯ ಸ್ಥಳದ ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರ್ ಕಾಲದಲ್ಲಿ ಪಿರ್ಯಾದಿಯವರು ಹಾಜರು ಪಡಿಸಿದ ನಿಪಿ–೫ ಲಗ್ನಪತ್ರಿಕೆ, ನಿಪಿ–೪ ನೋಟರಿ ಪ್ರಮಾಣ ಪತ್ರ, ನಿಪಿ–೩ ಶಾಲಾ ದೃಡೀಕರಣ ಪತ್ರ ಇವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಹೆಚ್‌ಸಿ ೬೨ರವರಿಗೆ ಉಕ್ತಲೇಖನ ನೀಡಿ ಮಹಜರ್ ಅನ್ನು ಬರೆಸಿರುತ್ತೇನೆ. ಸದರಿ ದಾಖಲೆಗಳನ್ನು ಠಾಣಾ ಪಿಎಫ್ ನಂ.

೫೫/೨೦೧೬ ನಿಪಿ–೭ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇ **ನೆ** ಎಂದು ನುಡಿದಿರುತ್ತಾರೆ.

೨೪. ಪ್ರಾಸಾ೪ರವರು ಮುಂದುವರೆದು ಸ್ಥಳದಲ್ಲಿ ಇದ್ದ ಆರೋಪಿ ೧ ರಿಂದ ೪ರವರನ್ನು ದಸ್ತಗಿರಿ ಮಾಡಿ ನನ್ನ ವಶಕ್ಕೆ ಪಡೆದುಕೊಂಡು ಠಾಣೆಗೆ ಕರೆತಂದು, ಪಿಎಸ್ಆರ್ ಕ್ರಮ ಜರುಗಿಸಿ, ಸಿಬ್ಬಂದಿಯ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ ೨, ೩, ೪ರವರನ್ನು ವಿಚಾರಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಶಾಲಾ ದಾಖಲಾತಿಗಳನ್ನು ಚಾಸಾ ೧ರವರೇ ಹಾಜರುಪಡಿಸಿದ್ದು ಈ ಬಗ್ಗೆ ಚಾಸಾ ೫ ಮತ್ತು ೬ರವರನ್ನು ವಿಚಾರಿಸಿರುತ್ತೇನೆ. ಆರೋಪಿ ೫ ಮತ್ತು ೭ರವರವನ್ನು ಪತ್ತೆಮಾಡಲು ಪ್ರಯತ್ನ ಮಾಡಿರುತ್ತೇನೆ ಅವರು ಸಿಗದೆ ಇದ್ದ ಕಾರಣ ಅವರನ್ನು ದಸ್ತಗಿರಿ ಮಾಡಿರುವುದಿಲ್ಲ. ೬ನೇ ಆರೋಪಿಯ ವಿರುದ್ಧ ಸಾಕ್ಷಿ ಪುರಾವೆ ಕಂಡುಬಾರದೇ ಇದ್ದಕಾರಣ ಅವರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದಿಲ್ಲ. ನಂತರ ಆರೋಪಿಗಳ ವಿರುದ್ಧ ತನಿಖೆ ನಡೆಸಿ, ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇ **ನೆಂದು ನುಡಿದು** ಆರೋಪಿಗಳನ್ನು ನೋಡಿ ಗುರುತಿಸಿದ್ದಾರೆ.

೨೫. **ಪ್ರಾಸಾ–೪ ರವರು ಆರೋಪಿಗಳ ಪರಪಾಟೀಸವಾಲಿನಲ್ಲಿ** ಚಾಸಾ೧ ರವರು ದೂರು ಕೊಡಲು ಠಾಣೆಗೆ ಬಂದಾಗ ಅವರೊಂದಿಗೆ ಬೇರೆ ಯಾರು ಬಂದಿದ್ದರು ಎಂದು ಗಮನಿಸಲಿಲ್ಲ ಠಾಣೆಯೊಳಗೆ ಅವರೊಬ್ಬರೇ ಬಂದಿದ್ದರು. ನಾವು ಕೃತ್ಯ ಸ್ಥಳಕ್ಕೆ ಹೋದಾಗ ಜನರೆಲ್ಲಾ ಇದ್ದರು ಮದುವೆಯ ಕಾರ್ಯಗಳು ನಡೆಯುತ್ತಿದ್ದವು. ನನ್ನ ತನಿಖಾ ಕಾಲದಲ್ಲಿ ಸದರಿ ಮದುವೆಯು ಹಿಂದೂ ಸಂಪ್ರದಾಯದಂತೆ ನಡೆಯುತ್ತಿರುವುದು ಕಂಡು ಬಂದಿತು. ನನ್ನ ತನಿಖಾ

ಕಾಲದಲ್ಲಿ ಮದುವೆಗೆ ಸಂಬಂಧಿಸಿದ ಫೋಟೋಗಳು, ವಿಡಿಯೋ ಸಿಕ್ಕಿರುವು ದಿಲ್ಲ. ಕಲ್ಯಾಣಮಂಟಪವನ್ನು ಯಾರೂ ಕಾದಿರಿಸಿದ್ದರು ಎಂಬ ಬಗ್ಗೆ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ. ಕಲ್ಯಾಣಮಂಟಪದ ಬಾಡಿಗೆಯ ರಶೀದಿಗಳನ್ನು ವಶಪಡಿಸಿಕೊಂಡಿಲ್ಲ. ವಿಚಾರಣಾ ಕಾಲದಲ್ಲಿ ಮುಕುಂದವರ್ಮ ಹಾಗೂ ಸೋಮಣ್ಣರವರನ್ನು ವಿಚಾರಣೆ ಮಾಡಿರುತ್ತೇನೆ. ಕಲ್ಯಾಣಮಂಟಪವನ್ನು ಕಾದಿರಿಸಿದ ಬಗ್ಗೆ ಸಂಬಂಧಿಸಿದ ರಿಜಿಸ್ಟರ್‌ಗಳನ್ನು ಹಾಜರುಪಡಿಸಿರುವುದಿಲ್ಲ. ಕಲ್ಯಾಣಮಂಟಪದ ನಿರ್ವಾಹಕರು ಆರೋಪಿಯಾಗಿರುವ ಕಾರಣ ಅವರು ರಿಜಿಸ್ಟರ್‌ಗಳನ್ನು ಕೊಡಲಿಲ್ಲ. ನಾನು ಪ್ರಯತ್ನ ಮಾಡಿದರೂ ದಾಖಲೆಗಳನ್ನು ವಶಪಡಿಸಿಕೊಳ್ಳಲು ಆಗಲಿಲ್ಲ. ಕಲ್ಯಾಣಮಂಟಪದಲ್ಲಿ ನೆರೆದಿದ್ದ ಸಾರ್ವಜನಿಕರನ್ನು ವಿಚಾರಣೆ ಮಾಡಿಲ್ಲ. ನಾವು ಕಲ್ಯಾಣ ಮಂಟಪಕ್ಕೆ ಹೋದ ಕೂಡಲೇ ಅವರೆಲ್ಲಾ ಹೊರಗೆ ಹೊರಟು ಹೋದರು. ಆರೋಪಿಗಳ ವಿರುದ್ಧ ಯಾವುದೇ ಅಪರಾಧವು ಕಂಡುಬಾರದೇ ಇದ್ದರೂ ಸಹಾ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

೨೬. ಪ್ರಾಸಾಳರವರು ಮುಂದುವರೆದು ನಿಪಿಃ ೩ ದಾಖಲೆಗೆ ಸಂಬಂಧಿಸಿದಂತೆ ನಾನು ಯರಿಯೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹೋಗಿ ವಿಚಾರಣೆ ಮಾಡಿರುತ್ತೇನೆ. ಆದರೆ ಮುಖ್ಯೋಪಧ್ಯಾಯರ ಹೇಳಿಕೆಯನ್ನು ದಾಖಲು ಮಾಡಿರುವುದಿಲ್ಲ. ನಿಪಿಃ ೫ ಲಗ್ನಪತ್ರಿಕೆಯನ್ನು ಯಾವ ಮುದ್ರಣಾಲಯದಲ್ಲಿ ಮುದ್ರಿಸಿರುತ್ತಾರೆ ಎಂದು ಆರೋಪಿಗಳನ್ನು ವಿಚಾರಿಸಿದಾಗ ಅವರು ಮಾಹಿತಿ ನೀಡಿರುವುದಿಲ್ಲ. ಕು. ಸುಧಾರವರ ತಂದೆ ರಾಜುರವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ವಿಚಾರಿಸಿರುವುದಿಲ್ಲ. ಚಾಸಾ ೧ ರವರು ದೂರು ನೀಡುವ ಮೊದಲು ಆರೋಪಿತ ಕೃತ್ಯದ ಬಗ್ಗೆ ನಮಗೆ ಮಾಹಿತಿ ಇತ್ತು. ಚಾಸಾ ೧ರವರು ದೂರು ಕೊಟ್ಟ ನಂತರ ಎಫ್‌ಐಆರ್ ದಾಖಲಿಸಿದ್ದೇನೆ.

ಚಾಸಾ ೧ರವರೊಡನೆ ಕಲ್ಯಾಣಮಂಟಕ್ಕೆ ದಾಳಿ ನಡೆಸಲು ಹೋದೆ. ನನಗೆ ಬೆಳಗ್ಗೆ ೧೦.೩೦ ಗಂಟೆಗೆ ಮಾಹಿತಿ ಬಂದಿರುತ್ತದೆ. ನನ್ನ ಜೊತೆ ೩–೪ ಜನ ನನ್ನ ಸಿಬ್ಬಂದಿಗಳು ಸಹಾ ಇದ್ದರು. ನಾವು ಬೆಳಗ್ಗೆ ಕಲ್ಯಾಣಮಂಟಕ್ಕೆ ಹೋದಾಗ ಬೆಳಗ್ಗೆ ೧೧.೦೦ ಗಂಟೆ ಆಗಿತ್ತು. ನಾವು ಬೆಳಗ್ಗೆ ಕಲ್ಯಾಣಮಂಟಪಕ್ಕೆ ಹೋದಾಗ ಮೊದಲು ವರನ ತಂದೆತಾಯಿಯರನ್ನು ಭೇಟಿ ಮಾಡಿದೆ. ನಿಪಿಃ ೩ ಕು. ಸುಧಾರವರಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಎದುರು ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿಃ ೩ ರಿಂದ ೫ ಈ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿಃ ೧ ಮಹಜರ್ ಅನ್ನು ಠಾಣೆಯಲ್ಲೇ ತಯಾರಿಸಿರುತ್ತೇನೆ ಎಂದರೆ ಸುಳ್ಳು. ಚಾಸಾ ೧ರವರು ಬಾಲ್ಯ ವಿವಾಹ ತಡೆಗಟ್ಟುವ ಅಧಿಕಾರಿಯಾದ ಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿಃ ೪ ರಲ್ಲಿ ಮದುವೆಯ ಉದ್ದೇಶಕ್ಕಾಗಿ ಪ್ರಮಾಣಪತ್ರ ಪ್ರಮಾಣೀಕರಿಸುತ್ತಿರುವುದಾಗಿ ನಮೂದು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

೨೭. ಅಭಿಯೋಜನೆಯು ಪ್ರತ್ಯಕ್ಷ ಸಾಕ್ಷಿ ಎಂದು ಪ್ರಾಸಾ೨– ಕು.ಸ್ವಾತಿಯವರನ್ನು ವಿಚಾರಣೆಗೊಳಪಡಿಸಿದೆ. ಪ್ರಾಸಾ೨ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ : ೦೨.೦೫.೨೦೧೬ ರಂದು ಕೊಳ್ಳೇಗಾಲದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಬಾಲ್ಯ ವಿವಾಹ ನಡೆಯುತ್ತಿದೆ ಎಂದು ನಮ್ಮ ತಂಡದ ಮುಖ್ಯಸ್ಥರಿಗೆ ಮಾಹಿತಿ ಬಂದಿತು. ಈ ಬಗ್ಗೆ ತನಿಖೆ ನಡೆಸುವ ಸಲುವಾಗಿ ನಾನು, ರಾಜೇಶ್ವರಿ ಹಾಗೂ ಮಹಾದೇವಸ್ವಾಮಿಯವರು ಸಿಡಿಪಿಒ ಶೇಷಾದ್ರಿಯವರೊಂದಿಗೆ ಕೊಳ್ಳೇಗಾಲದ ಮಹದೇಶ್ವರ ಕಲ್ಯಾಣ ಮಂಟಪಕ್ಕೆ ಬಂದೆವು. ಆಗ ಸಮಯ ಸುಮಾರು ಮಧ್ಯಾಹ್ನ ೧೨.೦೦ ಗಂಟೆ ಆಗಿತ್ತು. ನಾವು ಕಲ್ಯಾಣ ಮಂಟಪಕ್ಕೆ ದಾಳಿ ನಡೆಸಲು ಹೋಗುವ ಮೊದಲು

ಯರಿಯೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನಾನು ಹೋದೆ. ಬಾಲ್ಯ ವಿವಾಹವಾಗುತ್ತಿರುವ ಆರ್ ಸುಧಾರವರ ಜನ್ಮ ದಿನಾಂಕದ ಬಗ್ಗೆ ಮಾಹಿತಿ ಬೇಕು ಎಂದು ಶಾಲೆಯ ಹೆಚ್‌ಎಂ ರವರನ್ನು ಕೇಳಿದೆ. ಆಗ ಶಾಲೆಯ ಹೆಚ್‌ಎಂರವರು ಆರ್ ಸುಧಾರವರ ಜನ್ಮ ದಿನಾಂಕವನ್ನು ಬರೆದುಕೊಟ್ಟಿರುತ್ತಾರೆ. ನಾನು ನಿಪಿಃ ೩ನ್ನು ತೆಗೆದುಕೊಂಡು ಕೊಳ್ಳೇಗಾಲದ ಸಿಡಿಪಿಒ ಕಛೇರಿಗೆ ಬಂದೆ. ಸಿಡಿಪಿಒ ರವರೊಂದಿಗೆ ನಂತರ ನಾವೆಲ್ಲಾ ಕೊಳ್ಳೇಗಾಲ ಟೌನ್ ಪೊಲೀಸ್ ಠಾಣೆಗೆ ಬಂದು ಬಾಲ್ಯ ವಿವಾಹ ನಡೆಯುತ್ತಿರುವ ಬಗ್ಗೆ ಮಾಹಿತಿ ನೀಡಿದೆವು. ನಂತರ ಪೊಲೀಸರೊಂದಿಗೆ ಶ್ರೀ ಮಹದೇಶ್ವರ ಕಲ್ಯಾಣ ಮಂಟಪಕ್ಕೆ ಬಂದೆವು. ಕಲ್ಯಾಣಮಂಟಪದ ಮ್ಯಾನೇಜರ್ ಆದ ಸೋಮಣ್ಣರವರನ್ನು ಅಲ್ಲಿ ನಡೆಯುತ್ತಿರುವ ಮದುವೆಯ ಬಗ್ಗೆ ವಿಚಾರಣೆ ಮಾಡಿದೆವು. ಆಗ ಸೋಮಣ್ಣರವರು ಆರ್ ಸುಧಾರವರಿಗೆ ೧೮ ವರ್ಷಗಳಾಗಿದೆ ಎಂದು ನೋಟರಿಯವರ ಪ್ರಮಾಣ ಪತ್ರವನ್ನು ನೀಡಿ ಕಲ್ಯಾಣ ಮಂಟಪವನ್ನು ಬಾಡಿಗೆಗೆ ಪಡೆದುಕೊಂಡಿರುವುದಾಗಿ ತಿಳಿಸಿದರು. ಸದರಿ ನೋಟರಿ ಪ್ರಮಾಣ ಪತ್ರ ನಿಪಿ–೩ನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಆರ್ ಸುಧಾರವರ ಜನ್ಮ ದಿನಾಂಕ ೦೮.೧೧.೧೯೯೭ ಎಂದು ಇತ್ತು. ಆರ್ ಸುಧಾರವರ ತಾಯಿ ಶ್ರೀಮತಿ ನಾಗಮ್ಮರವರನ್ನು ವಿಚಾರಣೆ ಮಾಡಿದಾಗ ತಮ್ಮ ಮಗಳ ಜನ್ಮ ದಿನಾಂಕದ ಬಗ್ಗೆ ದಾಖಲೆಗಳು ಇಲ್ಲ ಎಂದು ಹೇಳಿದರು. ವರನ ಜನ್ಮ ದಿನಾಂಕದ ಬಗ್ಗೆ ವಿಚಾರಿಸಿದಾಗ ಅವರು ಡಿಎಲ್ ನ ಜೆರಾಕ್ಸ್ ಪ್ರತಿಯನ್ನು ತೋರಿಸಿದರು. ಅಪ್ರಾಪ್ತ ವಯಸ್ಕ ಬಾಲಕಿಗೆ ಮದುವೆಯಾಗುತ್ತಿದೆ ಎಂದು ಖಚಿತವಾಯಿತು. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸಿಡಿಪಿಒರವರು ಪೊಲೀಸರಿಗೆ ದೂರು ನೀಡಿರುತ್ತಾರೆ. ಈ ಸಂಗತಿಗಳನ್ನೆಲ್ಲಾ ನಾನು ತನಿಖಾಧಿಕಾಧಿಕಾರಿಯ ಎದುರು ಹೇಳಿಕೆ ನೀಡಿರುತ್ತೇನೆಂದು ನುಡಿದು ಆರೋಪಿಗಳನ್ನು ಗುರುತಿಸಿದ್ದಾರೆ.

೨೮. **ಫ್ರಾಸಾ-೨ ರವರು ಆರೋಪಿಗಳ ಪರ ಪಾಟೀಸವಾಲಿನಲ್ಲಿ** ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಖುದ್ದು ಮಾಹಿತಿಯನ್ನು ಯಾರೂ ನೀಡಿರುವುದಿಲ್ಲ. ನಮಗೆ ಮಾಹಿತಿ ಬಂದಾಗ ಬೆಳಗ್ಗೆ ೯.೩೦ ಗಂಟೆ ಆಗಿತ್ತು. ಆ ಸಮಯದಲ್ಲಿ ನಾನು ಯಳಂದೂರಿನ ಮಕ್ಕಳ ಸಹಾಯವಾಣಿ ಕೇಂದ್ರದ ಕಛೇರಿಯಲ್ಲಿ ಇದ್ದೆ. ಕಛೇರಿಯಲ್ಲಿ ಟೀಂ ಲೀಡರ್ ಮಹಾದೇವಸ್ವಾಮಿ, ರಾಜೇಶ್ವರಿ ಹಾಗೂ ನವೀನ್‌ರವರು ಇದ್ದರು. ನಾವು ಸಿಡಿಪಿಒ ರವರಿಗೆ ಫೋನ್ ಮೂಲಕ ಮಾಹಿತಿ ನೀಡಿದೆವು. ನಾನು ಮೊದಲು ಯರಿಯೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹೋದೆ ನಂತರ ಸಿಡಿಪಿಒ ಕಛೇರಿಗೆ ಹೋದೆ. ಯರಿಯೂರಿನ ಸುಧಾ ಎಂಬ ಅಪ್ರಾಪ್ತ ವಯಸ್ಕ ಬಾಲಕಿಯ ಮದುವೆಯಾಗುತ್ತಿದೆ ಎಂಬ ಮಾಹಿತಿ ಬಂದ ಕಾರಣ ನಾನು ಯರಿಯೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹೋದೆ. ನಾನು ಶಾಲೆಗೆ ಹೋದಾಗ ಬೆಳಗ್ಗೆ ೧೦.೩೦ ಗಂಟೆ ಆಗಿತ್ತು. ನಮಗೆ ಮಕ್ಕಳ ಸಹಾವಾಣಿ ಕೇಂದ್ರದ ೧೦೯೮ ದೂರವಾಣಿಗೆ ಮಾಹಿತಿ ನೀಡಿದವರು ಸುಧಾ ಹಾಗೂ ಅವರ ತಂದೆ ತಾಯಿಯ ವಿವರಗಳನ್ನು ಹೇಳಿದ್ದರು. ಸುಧಾರವರು ಯಾವ ಶಾಲೆಯಲ್ಲಿ ಓದುತ್ತಿದ್ದರು ಎಂದು ಸಹಾ ಮಾಹಿತಿ ತಿಳಿಸಿದ್ದರು. ನಾನು ಶಾಲೆಗೆ ಹೋದಾಗ ಹೆಚ್‌ಎಂ ರವರು ಇರಲಿಲ್ಲ ಮಳವಳ್ಳಿಗೆ ಹೋಗಿದ್ದಾರೆ ವೈಟ್ ಮಾಡಿ ಎಂದರು ನಾನು ವೈಟ್ ಮಾಡಿದೆ. ನನಗೆ ಈ ಮಾಹಿತಿ ತಿಳಿಸಿದ ಟೀಚರ್ ಹೆಸರು ನೆನಪಿಲ್ಲ. ಹೆಚ್‌ಎಂ ರವರು ಬೆಳಗ್ಗೆ ೧೧.೩೦ ಗಂಟೆಗೆ ಬಂದರು. ಹೆಚ್‌ಎಂ ರವರಿಗೆ ನಾನು ಫೋನ್ ಮಾಡಿ ನಿಮ್ಮ ಶಾಲೆಯಲ್ಲಿ ಓದಿರುವ ಸುಧಾರವರ ವಿವರ ಬೇಕು ಎಂದು ಮೊದಲೇ ಹೇಳಿದ್ದೆ. ಹೆಚ್‌ಎಂರವರು ಶಾಲೆಗೆ ಬಂದು ಅಂದಾಜು ೨೦ ನಿಮಿಷಗಳ ಕಾಲ ಹುಡುಕಾಡಿ ವಿವರಗಳನ್ನು ಕೊಟ್ಟರು. ಹೆಚ್‌ಎಂರವರು ರಿಜಿಸ್ಟರ್‌ಗಳನ್ನು ಅವರೇ ತಪಾಸಣೆ ಮಾಡಿದರು. ನಿಪಿಃ ೩ನ್ನು ನೀಡುವ ಮೊದಲು ವಿವರಗಳನ್ನು ಓದಿ ಹೇಳಿದರು.ಹೆಚ್‌ಎಂ ರವರು ನೋಡಿದ ರಿಜಿಸ್ಟರ್‌ನಲ್ಲಿ ಸುಧಾ ಎಂಬ

ಹೆಸರಿನ ಬೇರೆಯವರು ಇದ್ದರೋ ಇಲ್ಲವೋ ನೋಡಿಲ್ಲ. ಆ ರಿಜಿಸ್ಟರ್‌ನಲ್ಲಿ ಮಕ್ಕಳ ಫೋಟೋಗಳನ್ನು ಅಂಟಿಸಿದ್ದರು ಅದನ್ನು ನೋಡಿರುತ್ತೇನೆ. ನಂತರ ನಾನು ಕೊಳ್ಳೇಗಾಲದ ಸಿಡಿಪಿಒ ಆಫೀಸ್‌ಗೆ ಮಧ್ಯಾಹ್ನ ೧೨.೦೦ ಗಂಟೆಗೆ ಬಂದೆ ಎಂದು ನುಡಿದಿರುತ್ತಾರೆ.

೨೯. ಪ್ರಾಸಾ೨ರವರು ಮುಂದುವರೆದು ಸೋಮಣ್ಣರವರನ್ನು ನಾವು ಭೇಟಿ ಮಾಡಿದಾಗ ಮಧ್ಯಾಹ್ನ ೧೨.೩೦-೧೨.೪೫ ಗಂಟೆ ಆಗಿತ್ತು. ಆಗ ನನ್ನೊಂದಿಗೆ ಸಿಡಿಪಿಒ ಶೇಷಾದ್ರಿ, ಮಹಾದೇವಸ್ವಾಮಿ, ರಾಜೇಶ್ವರಿ, ಟೌನ್ ಪಿಎಸ್‌ಐ ಆನಂದ್ ಇದ್ದರು. ನಾವು ಚೌಲ್ಟ್ರಿಗೆ ಬಂದಾಗ ನಮ್ಮ ಕಛೇರಿಯ ಬೇರೆ ಸಿಬ್ಬಂದಿಗಳು ಇರಲಿಲ್ಲ. ಅದೇ ದಿನ ನಾವು ಮಧ್ಯಾಹ್ನ ೧.೦೦-೧.೩೦ ಗಂಟೆಗೆ ಪೊಲೀಸ್ ಠಾಣೆಗೆ ಹೋದೆವು. ಆರೋಪಿತ ಘಟನೆಗೆ ಮೊದಲು ನಾನು ಆರೋಪಿಗಳನ್ನು ನೋಡಿರಲಿಲ್ಲ. ಡಿಎಲ್ ಜೆರಾಕ್ಸ್ ಅನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾಗಮ್ಮರವರನ್ನು ನಾನೇ ವಿಚಾರಣೆ ಮಾಡಿದೆ. ನಾನು ಆ ವಿಚಾರಣೆಯನ್ನು ಬರವಣಿಗೆ ಮಾಡಿರುವುದಿಲ್ಲ. ನಾವು ಚೌಲ್ಟ್ರಿಗೆ ಹೋದಾಗ ಮ್ಯಾನೇಜರ್ ಸೋಮಣ್ಣ ಇದ್ದರು, ಹುಡುಗಿಯ ತಂದೆ ತಾಯಿ ಮತ್ತು ಹುಡುಗನ ತಂದೆತಾಯಿಯನ್ನು ಕರೆಸಿ ಎಂದು ಹೇಳಿದಾಗ ಸೋಮಣ್ಣರವರು ನಾಗಮ್ಮರವನ್ನು ಕರೆಸಿದರು. ಸದರಿ ಕಲ್ಯಾಣಮಂಟಪದಲ್ಲಿ ಮದುವೆ ಹಿಂದೂ ಸಂಪ್ರದಾಯದಂತೆ ನಡೆಯುತ್ತಿತ್ತು. ನಾವು ಕಲ್ಯಾಣಮಂಟಪಕ್ಕೆ ಹೋದಾಗ ಪುರೋಹಿತರು ಇರಲಿಲ್ಲ. ನಾನು ಹೇಳಿದಂತೆ ಬಾಲ್ಯವಿವಾಹ ನಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಕಛೇರಿಯ ದಾಖಲೆಗಳನ್ನು ನೋಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡದೇ ಇದ್ದರೂ

ಪೊಲೀಸರು ಹಾಗೂ ನಾವು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

೩೦. ಪ್ರಾಸಾ೨ರವರು ಮುಂದುವರೆದು ಯಾವುದೇ ದಾಳಿ ನಡೆಸುವ ಮೊದಲು ನಮ್ಮ ಕರ್ತವ್ಯದ ಬಗ್ಗೆ ದಿನಚರಿಯನ್ನು ಬರೆಯುತ್ತೇವೆ. ನಾವು ಕಲ್ಯಾಣಮಂಟಪಕ್ಕೆ ಹೋದಾಗ ಮಧ್ಯಾಹ್ನ ೧೨.೩೦ ಗಂಟೆ ಆಗಿತ್ತು. ಕಲ್ಯಾಣಮಂಟಪವನ್ನು ಯಾರು ಕಾಯ್ದಿರಿಸಿದ್ದರು ಎಂದು ನೆನಪಿಲ್ಲ. ರಿಜಿಸ್ಟರ್ ಅನ್ನು ನೋಡಿರುತ್ತೇನೆ ಯಾವುದೇ ರಶೀದಿಗಳನ್ನು ಪಡೆದುಕೊಂಡಿರುವುದಿಲ್ಲ. ನಾವು ಕಲ್ಯಾಣಮಂಟಪಕ್ಕೆ ಹೋದ ನಂತರ ಮದುವೆಯ ಕರೆಯೋಲೆಯನ್ನು ಕೊಟ್ಟಿರುತ್ತಾರೆ. ನಾವು ಕಲ್ಯಾಣಮಂಟಪಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಮದುವೆ ಮುಗಿದು ರಿಸೆಪ್‌ಷನ್ ನಡೆಯುತ್ತಿತ್ತು. ೫ನೇ ಆರೋಪಿ ಸೋಮಣ್ಣರವರು ಮಹದೇಶ್ವರ ಕಲ್ಯಾಣ ಮಂಟಪದ ಮ್ಯಾನೇಜರ್ ಆಗಿರುತ್ತಾರೆ ಎಂದು ದಾಖಲೆಗಳನ್ನು ನೋಡಿರುವುದಿಲ್ಲ. ನಾವು ನಡೆಸಿದ ದಾಳಿಯ ಬಗ್ಗೆ ವಿಡಿಯೋ ಚಿತ್ರೀಕರಣ ನಡೆಸಿರುತ್ತೇವೆ. ಹುಡುಗ ಹಾಗೂ ಹುಡುಗಿಯ ಕಡೆಯ ಯಜಮಾನರು ಯಾರು ಎಂದು ವಿಚಾರಿಸಿ ಅವರ ಫೋಟೋಗಳನ್ನು ತೆಗೆದುಕೊಂಡಿಲ್ಲ. ಕಲ್ಯಾಣಮಂಟಪದ ಎದುರು ಸ್ವಾಗತ ಕಮಾನುಗಳನ್ನು ಇರಿಸಿರುತ್ತಾರೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾವು ಯಾವುದೇ ಸ್ವಾಗತ ಕಮಾನುಗಳ ಫೋಟೋ ತೆಗೆಸಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಘಟನೆ ನಡೆದಿಲ್ಲ, ಹಾಗೂ ನಾನು ನುಡಿಯುತ್ತಿರುವ ಘಟನೆಗಳಿಗೂ ಆರೋಪಿಗಳಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಚಾಸಾ ೧ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ೫ನೇ ಆರೋಪಿಯ ಕಛೇರಿಯಲ್ಲಿ ಉಳಿದ ಆರೋಪಿಗಳನ್ನು ವಿಚಾರಣೆ ಮಾಡಿರುವುದಾಗಿ ಹೇಳಿಲ್ಲ ಎಂದು ನುಡಿದಿರುತ್ತಾರೆ.

೩೧. ಪ್ರಾಸಾ೨ರವರು ಮುಂದುವರೆದು ಕಲ್ಯಾಣಮಂಟಪದವರು ನಮಗೆ ಸುಧಾರವರ ನೋಟರಿ ದೃಡೀಕೃತ ಪ್ರಮಾಣ ಪತ್ರ ಹಾಗೂ ಮದುವೆಯ ಕರೆಯೋಲೆಯನ್ನು ತೋರಿಸಿರುತ್ತಾರೆ. ನೋಟರಿ ದೃಡೀಕೃತ ಪ್ರಮಾಣ ಪತ್ರದಲ್ಲಿ ಮದುವೆಯ ಉದ್ದೇಶಕ್ಕಾಗಿ ವಯಸ್ಸನ್ನು ದೃಡೀಕರಿಸುತ್ತಿರುವುದಾಗಿ ಬರೆದಿರುವುದಿಲ್ಲ. ನಿಪಿಃ ೪ ನೋಟರಿ ದೃಡೀಕೃತ ಪ್ರಮಾಣ ಪತ್ರಕ್ಕೆ ಸಂಬಂಧಿಸಿ ದಂತೆ ನೋಟರಿಯವನ್ನು ವಿಚಾರಣೆ ಮಾಡಿ ಅವರ ರಿಜಿಸ್ಟರ್‌ಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಕಲ್ಯಾಣಮಂಟಪದ ರಿಜಿಸ್ಟರ್‌ನಲ್ಲಿ ನೋಟರಿ ದೃಡೀಕೃತ ಪ್ರಮಾಣ ಪತ್ರದ ಆಧಾರದಲ್ಲಿ ವಯಸ್ಸನ್ನು ದೃಡೀಕರಿಸಿಕೊಳ್ಳಲಾಗಿದೆ ಎಂದು ಬರೆದಿರಲಿಲ್ಲ. ಕಲ್ಯಾಣಮಂಟದ ರಿಜಿಸ್ಟರ್ ಅನ್ನು ನಮ್ಮ ದಾಳಿಯ ಕಾಲದಲ್ಲಿ ವಶಪಡಿಸಿಕೊಂಡಿಲ್ಲ. ದಿನಾಂಕ ಃ ೦೨.೦೫.೨೦೧೬ರಂದು ಮಧ್ಯಾಹ್ನ ೧೨.೦೦ ಗಂಟೆಗೆ ಕೊಳ್ಳೇಗಾಲದ ಶ್ರೀ ಮಹದೇಶ್ವರ ಕಲ್ಯಾಣ ಮಂಟಪಕ್ಕೆ ಭೇಟಿ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಕಲ್ಯಾಣಮಂಟಪದ ಮ್ಯಾನೇಜರ್‌ರವರ ಕಛೇರಿಯಲ್ಲಿ ಆರೋಪಿಗಳನ್ನು ವಿಚಾರಣೆ ಮಾಡಿರುವು ದಿಲ್ಲ ಎಂದರೆ ಸರಿಯಲ್ಲ. ನಾವು ಬಾಲಕಿ ಸುಧಾರವರನ್ನು ಚಾಮರಾಜನಗರದ ಬಾಲಕಿಯರ ಬಾಲ ಗೃಹಕ್ಕೆ ಸೇರಿಸಿದೆವು. ಈ ಸಂಗತಿಯನ್ನು ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ. ಚಾಸಾ ೧ ಹಾಗೂ ನನ್ನ ಹಿರಿಯ ಅಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

೩೨. ಪ್ರಾಸಾ೧, ಪ್ರಾಸಾ೨ ಮತ್ತು ಪ್ರಾಸಾ೪ರವರ ನುಡಿ ಸಾಕ್ಷ್ಯ ಹಾಗೂ ನಿಪಿ೧ರಿಂದ ನಿಪಿ೬ನ್ನು ಗಮನಿಸಿದಾಗ ಪ್ರಾಸಾ೧ರವರು ಕೊಳ್ಳೇಗಾಲದ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ದಿ.೦೨.೦೫.೨೦೧೬ರಂದು ಏರ್ಪಾಡಾಗಿದ್ದ

ಕು.ಸುಧಾ ಹಾಗೂ ಒಂದನೇ ಆರೋಪಿ ಶ್ರೀ ಎಂ.ಮಹದೇವಸ್ವಾಮಿ @ ಮಹೇಶರವರ ವಿವಾಹವು ಬಾಲ್ಯವಿವಾಹವೆಂದು ಮಾಹಿತಿ ತಿಳಿದು ಬಂದ ಕಾರಣ ಕೊಳ್ಳೇಗಾಲದ ಪಟ್ಟಣ ಪೋಲೀಸ್ ಠಾಣೆಗೆ ಬಂದು ಮಾಹಿತಿ ನೀಡಿ ಬಾಲ್ಯ ವಿವಾಹವನ್ನು ತಡೆಗಟ್ಟುವ ಸಲುವಾಗಿ ತಮ್ಮ ಸಿಬ್ಬಂದಿ ಹಾಗೂ ಪ್ರಾಸಾ೪ ಹಾಗೂ ಇತರ ಪೋಲೀಸ್ ಸಿಬ್ಬಂದಿಯೊಂದಿಗೆ ಸದರಿ ಕಲ್ಯಾಣ ಮಂಟಪಕ್ಕೆ ಬೆಳಗ್ಗೆ ೧೦–೩೦ ೧೧–೦೦ ಘಂಟೆ ಅವಧಿಯಲ್ಲಿ ಭೇಟಿ ನೀಡಿರುವುದು ಕಂಡು ಬರುತ್ತದೆ. ಪ್ರಾಸಾ೧ ಮತ್ತು ಪ್ರಾಸಾ೪ರವರು ಆರೋಪಿ ೧ರಿಂದ ೫ರವರನ್ನು ವಿಚಾರಣೆಗೊಳಪಡಿಸಿದ ನಂತರ ಪ್ರಾಸಾ೧ರವರು ಕೊಳ್ಳೇಗಾಲ ಪಟ್ಟಣ ಪೋಲೀಸ್ ಠಾಣೆಗೆ ಹಾಜರಾಗಿ ನಿಪಿ೨ರಂತೆ ದೂರು ನೀಡಿರುತ್ತಾರೆ. ಪ್ರಾಸಾ೪ರವರು ಸದರಿ ದೂರನ್ನು ಸ್ವೀಕರಿಸಿ ಪ್ರಕರಣವನ್ನು ನೋಂದಾಯಿಸಿ ನಿಪಿ೬ರಂತೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತಾರೆ.

೩೩. ಪ್ರಾಸಾ೪ರವರು ದಿ.೨.೫.೧೬ರಂದು ಶ್ರೀ ಮಹದೇಶ್ವರ ಕಲ್ಯಾಣ ಮಂಟಪಕ್ಕೆ ಪುನಃ ಭೇಟಿ ನೀಡಿ ಪ್ರಾಸಾ೧, ಚಾಸಾ೭ ಮತ್ತು ಪ್ರಾಸಾ೩ರವರ ಸಮಕ್ಷಮ ಮದ್ಯಾಹ್ನ ೨–೧೦ರಿಂದ ೩–೦೦ ಘಂಟೆ ಅವಧಿಯಲ್ಲಿ ನಿಪಿ೧ರಂತೆ ಮಹಜರ್ ಕ್ರಮ ಜರುಗಿಸಿ, ನಿಪಿ೩, ನಿಪಿ೪ ಮತ್ತು ನಿಪಿ೫ ದಾಖಲೆಗಳನ್ನು ಜಪ್ತು ಮಾಡಿರುತ್ತಾರೆ. ಪ್ರಾಸಾ೨ರವರ ಸಾಕ್ಷ್ಯವನ್ನು ಗಮನಿಸಿದಾಗ ಅವರು ಪ್ರಾಸಾ೧ರವರ ಜೊತೆ ಕೊಳ್ಳೇಗಾಲ ಪಟ್ಟಣ ಪೋಲೀಸ್ ಠಾಣೆಗೆ ಬರುವ ಮೊದಲೇ ಯರಿಯೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಕು.ಸುಧಾರವರ ಜನ್ಮ ದಿನಾಂಕಕ್ಕೆ ಸಂಬಂಧಿಸಿದಂತೆ ನಿಪಿ೩ ದಾಖಲೆಯನ್ನು ಪಡೆದುಕೊಂಡು ಬಂದಿರುವುದು ವ್ಯಕ್ತವಾಗುತ್ತದೆ. ಪ್ರಾಸಾ೧ ಮತ್ತು ಪ್ರಾಸಾ೨ರವರ ಸಾಕ್ಷ್ಯದಲ್ಲಿ ಸ್ವಲ್ಪ ಮಟ್ಟಿಗೆ ಗೊಂದಲ ಹಾಗೂ ವ್ಯತ್ಯಾಸ ಇರುವುದು ಕಂಡು ಬಂದರೂ ಸಹ ಪ್ರಾಸಾ೨ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿಯೇ ಇದೆ. ಆರೋಪಿಗಳು

ನಿಪಿ೧ರಂತೆ ಜರುಗಿಸಲಾದ ಸ್ಥಳ ಹಾಗೂ ಜಪ್ತು ಮಹಜರ್ ಕ್ರಮವನ್ನು ಹಾಗೂ ನಿಪಿ೩ರ ನೈಜತೆಯನ್ನು ನಿರಾಕರಿಸಿರುತ್ತಾರೆ. ಆದರೆ ನಿಪಿ೪ ಮತ್ತು ನಿಪಿ೫ರ ನೈಜತೆಯನ್ನು ಪ್ರಶ್ನಿಸಿರುವುದಿಲ್ಲ. ನಿಪಿ೩ನ್ನು ಪ್ರಾಸಾ೨ರವರು ಪಡೆದುಕೊಳ್ಳಲು ನಿಯಮಾವಳಿಗಳನ್ನು ಅನುಸರಿಸಿಲ್ಲ ಎಂದು ಆರೋಪಿಗಳು ಪ್ರತಿಪಾದಿಸಿರುತ್ತಾರೆ.

೩೪. ಪ್ರಾಸಾ೩-ಶ್ರೀ ರವೀಂದ್ರರವರನ್ನು ನಿಪಿ೧ ಮಹಜರ್‌ನ ಸಾಕ್ಷಿಯೆಂದು ವಿಚಾರಣೆಗೊಳಪಡಿಸಲಾಗಿದೆ. ಪ್ರಾಸಾ೩ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ೧ ಮಹಜರ್‌ನಲ್ಲಿ ತಮ್ಮ ರುಜುವನ್ನು ಗುರುತಿಸಿದ್ದಾರೆ. ಮೇ ೨೦೧೬ ರಲ್ಲಿ ಸಿಡಿಪಿಓರವರು ನಮ್ಮ ಕಛೇರಿಗೆ ಮದುವೆ ಆಹ್ವಾನ ಪತ್ರಿಕೆ ತಂದಿದ್ದರು. ಆಗ ನಿಪಿ೧ ಮಹಜರ್‌ಗೆ ರುಜು ಮಾಡಿರುತ್ತೇನೆ. ನನ್ನನ್ನು ಕಛೇರಿಯಿಂದ ಬೇರೆ ಕಡೆಗೆ ಕರೆದುಕೊಂಡು ಹೋಗಿರುವುದಿಲ್ಲ. ಬಾಲ್ಯ ವಿವಾಹ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಪಿ೧ರಲ್ಲಿ ರುಜು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

೩೫. ಪ್ರಾಸಾ೩ರವರು ಅಭಿಯೋಜನೆಯ ಪಾಟೀ ಸವಾಲಿನಲ್ಲಿ ನಿಪಿ೧ನ್ನು ಓದಿ ಹೇಳಿದಾಗ ನಿಪಿ೧ ಮಹಜರ್ ಕ್ರಮವನ್ನು ಒಪ್ಪಿಕೊಂಡು ಮಹಜರ್ ಕಾಲದಲ್ಲಿ ಪೋಲೀಸರು ನಿಪಿ೩, ೪, ಮತ್ತು ೫ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

೩೬. ಪ್ರಾಸಾ೩ರವರು ಆರೋಪಿಗಳ ಪರ ಪಾಟೀ ಸವಾಲಿನಲ್ಲಿ ನಾನು ನಿಪಿ೧ ದಾಖಲೆಗೆ ರುಜು ಮಾಡಿದಾಗ ಮಧ್ಯಾಹ್ನ ಆಗಿತ್ತು. ನಿಖರವಾದ ಸಮಯ ತಿಳಿದಿಲ್ಲ. ನಿಪಿ೧ ದಾಖಲೆಗೆ ನಾನು ರುಜು ಮಾಡುವ ಮೊದಲೇ ಅದನ್ನು ಬೇರೆ ಎಲ್ಲೋ ಬರವಣಿಗೆ ಮಾಡಿಕೊಂಡು ತಂದಿದ್ದರು. ನಿಪಿ೧ ದಾಖಲೆಗೆ ನಾನು ರುಜು ಮಾಡುವಷ್ಟರಲ್ಲಿ ಸದರಿ ದಾಖಲೆಗೆ ಬೇರೆ

ಯಾರಾದರೂ ರುಜು ಮಾಡಿದ್ದರೋ ಇಲ್ಲವೋ ಹೇಳಲು ಆಗುವುದಿಲ್ಲ. ನನ್ನ ಸಮಕ್ಷಮ ನನ್ನ ಸಹೋದ್ಯೋಗಿ ಗಿರೀಶರವರು ಸಹ ನಮ್ಮ ಕಛೇರಿಯಲ್ಲೇ ನಿಪಿ೧ ದಾಖಲೆಗೆ ರುಜು ಮಾಡಿರುತ್ತಾರೆ. ನಿಪಿ೩, ೪ ಮತ್ತು ೫ ದಾಖಲೆಗಳನ್ನು ಪೋಲೀಸರು ಯಾರಿಂದ ಯಾವಾಗ, ಎಲ್ಲಿ ಯಾವ ಕಾರಣಕ್ಕಾಗಿ ಎಷ್ಟು ಹೊತ್ತಿಗೆ ವಶಪಡಿಸಿಕೊಂಡರು ಎಂದು ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ.

೩೭. ಪ್ರಾಸಾ೩ರವರ ಸಾಕ್ಷ್ಯವನ್ನು ಗಮನಿಸಿದಾಗ ಅವರು ನಿಪಿ೧ ಮಹಜರ್ ಕ್ರಮಕ್ಕೆ ಸಾಕ್ಷಿದಾರರಾಗಿದ್ದರೂ ಉದ್ದೇಶಪೂರ್ವಕವಾಗಿ ನಿಪಿ೧ ಮಹಜರ್ ಕ್ರಮವನ್ನು ನಿರಾಕರಿಸಿರುವುದು ವ್ಯಕ್ತವಾಗುತ್ತದೆ. ಒಂದು ವೇಳೆ ಪ್ರಾಸಾ೩ರವರು ಕೃತ್ಯ ಸ್ಥಳದಲ್ಲಿ ಮಹಜರ್ ಸಮಯದಲ್ಲಿ ಹಾಜರಿದ್ದು ನಿಪಿ೧ ಮಹಜರ್‌ಗೆ ರುಜು ಮಾಡದೇ ಇದ್ದಲ್ಲಿ ಅಭಿಯೋಜನೆಯ ಪಾಟೀ ಸವಾಲಿನಲ್ಲೂ ಸಹ ನಿಪಿ೧ ಮಹಜರ್ ಕ್ರಮವನ್ನು ನಿರಾಕರಿಸಬೇಕಾಗಿತ್ತು. ಅಭಿಯೋಜನೆಯ ಪಾಟೀ ಸವಾಲಿನಲ್ಲಿ ನಿಪಿ೧ ಮಹಜರ್ ಕ್ರಮವನ್ನು ನಿಪಿ೩, ನಿಪಿ೪ ಮತ್ತು ನಿಪಿ೫ ದಾಖಲೆಗಳ ಗುರುತನ್ನು ಒಪ್ಪಿಕೊಂಡಿರುವ ಪ್ರಾಸಾ೩ರವರು ಆರೋಪಿಗಳ ಪರ ಪಾಟೀ ಸವಾಲಿನಲ್ಲಿ ನಿಪಿ೧ ಮಹಜರ್ ಕ್ರಮವನ್ನು ಹಾಗೂ ನಿಪಿ೩, ನಿಪಿ೪ ಮತ್ತು ನಿಪಿ೫ ಮಹಜರ್ ಕ್ರಮವನ್ನು ನಿರಾಕರಿಸಿರುವುದು ಪ್ರಾಸಾ೩ರವರ ಸಾಕ್ಷ್ಯದ ವಿಶ್ವಾಸರ್ಹತೆಗೆ ಭಂಗವನ್ನುಂಟು ಮಾಡಿದೆ. ಪ್ರಾಸಾ೩ರವರು ನಿಪಿ೧ ಮಹಜರ್ ಕ್ರಮವನ್ನು ನಿರಾಕರಿಸಿರುತ್ತಾರೆ ಎಂಬ ಏಕ ಮಾತ್ರ ಕಾರಣಕ್ಕಾಗಿ ಅಭಿಯೋಜನೆಯ ಪ್ರಕರಣವನ್ನು ಸಾರಾಸಗಟಾಗಿ ನಿರಾಕರಿಸಲಾಗುವುದಿಲ್ಲ. ಅಭಿಯೋಜನೆಯು ಮಂಡಿಸಿರುವ ಇತರ ಸಾಕ್ಷ್ಯದ ಹಿನ್ನೆಲೆಯಲ್ಲಿ ನಿಪಿ೧ರಂತೆ ಮಹಜರ್ ಕ್ರಮ ಜರುಗಿಸಲಾಯಿತೇ, ನಿಪಿ೩, ನಿಪಿ೪ ಮತ್ತು ನಿಪಿ೫ ಈ ಪ್ರಕರಣಕ್ಕೆ ಸಂಬಂಧಿಸಿದ ನೈಜ ದಾಖಲೆಗಳೇ ಎಂಬ ಸಂಗತಿಗಳನ್ನು ಪರಾಮರ್ಶಿಸಬೇಕಾಗಿದೆ.

೩೮. ಅಭಿಯೋಜನೆಯು ಕು.ಸುಧಾರವರು ವ್ಯಾಸಂಗ ಮಾಡಿದ ಯರಿಯೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿಯಾಗಿರುವ ಶ್ರೀಮತಿ ನಾಗರತ್ನರವರನ್ನು ಪ್ರಾಸಾ೫ ಎಂದು ವಿಚಾರಣೆಗೊಳಪಡಿಸಿದೆ. ಪ್ರಾಸಾ೫ರವರು ನಿಪಿ೩/ಶಾಲಾ ದಾಖಲಾತಿ ಧೃಢೀಕರಣ ಪತ್ರವನ್ನು ನೋಡಿ ಸದರಿ ದಾಖಲೆಯಲ್ಲಿ ತಮ್ಮ ಹಿಂದಿನ ಪ್ರಭಾರ ಮುಖ್ಯ ಶಿಕ್ಷಕರಾಗಿದ್ದ ಶ್ರಿ ಮಹಾದೇವಸ್ವಾಮಿವರ ರುಜುವನ್ನು ನಿಪಿ೩(ಎ) ಎಂದು ಗುರುತಿಸಿರುತ್ತಾರೆ. ಫ್ರಾಸಾ-೫ ಶ್ರೀಮತಿ ನಾಗರತ್ನ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನಮ್ಮ ಶಾಲೆಯ ಯಾವುದಾದರೂ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ದೃಡೀಕರಣ ಪತ್ರವನ್ನು ಕೇಳಿದಲ್ಲಿ ಶಾಲೆ ಪ್ರವೇಶಾತಿ ರಿಜಿಷ್ಟರನ್ನು ನೋಡಿ ಅದರಲ್ಲಿ ನಮೂದಿಸಿ ಕೊಡುತ್ತೇವೆ. ನಿಪಿ-೩ ನ್ನು ಸಹ ಅದೇರೀತಿ ಮಂಜೂರು ಮಾಡಲಾಗಿದೆ. ನಿಪಿ-೩ ದಾಖಲೆಯು ಕು. ಆರ್ ಸುಧಾ ದಾಖಲಾತಿ ಸಂಖ್ಯೆ: ೧/೨೦೦೫-೦೬ ಇವರಿಗೆ ಸಂಬಂಧಿಸಿದೆ. ನಾನು ಈ ದಿನ ನಮ್ಮ ಶಾಲೆಯಲ್ಲಿ ನಿರ್ಹಿಸಿರುವ ಮೂಲ ದಾಖಲಾತಿ ರಿಜಿಷ್ಟರನ್ನು ಹಾಜರು ಪಡಿಸಿದ್ದೇನೆ. ಕು. ಆರ್ ಸುಧಾರವರಿಗೆ ಸಂಬಂಧಿಸಿದ ದಾಖಲೆಯ ವಿವರಗಳು ಸದರಿ ರಿಜಿಷ್ಟರನಲ್ಲಿ ನಮೂದು ಮಾಡಲಾಗಿದೆ ಎಂದು ನುಡಿದು ಮೂಲ ರಿಜಿಸ್ಟರ್‌ನ್ನು ಹಾಜರುಪಡಿಸಿರುತ್ತಾರೆ. ಮೂಲ ರಿಜಿಸ್ಟರನ್ನು ನಿಪಿ೮ ಎಂದು ಗುರುತಿಸಲಾಗಿದೆ. ಕು. ಆರ್ ಸುಧಾರವರಿಗೆ ಸಂಬಂಧಿಸಿದ ಭಾಗ ನಿಪಿ-೮(ಎ) ಎಂದು ಗುರುತಿಸಿದ್ದಾರೆ. ನಿಪಿ೮(ಎ)ದಾಖಲೆಯ ದೃಡಿಕೃತ ಪ್ರತಿ ನಿಪಿ-೮(ಬಿ)ನ್ನು ಗುರುತಿಸಿದ್ದಾರೆ. ನಿಪಿ-೩ ಹಾಗೂ ನಿಪಿ-೮(ಎ)ಯಲ್ಲಿ ಕು.ಆರ್ ಸುಧಾರವರಿಗೆ

ಸಂಬಂಧಿಸಿದ ವಿವರಗಳು ಪರಸ್ಪರ ತಾಳೆಯಾಗುತ್ತದೆ. ಅದರಂತೆ ಕು.ಆರ್ ಸುಧಾರವರ ಜನ್ಮ ದಿನಾಂಕಃ ೦೮.೦೧.೨೦೦೦ ಆಗಿರುತ್ತದೆ ಎಂದು ನುಡಿದಿರುತ್ತಾರೆ.

೩೯. ಪ್ರಾಸಾ-೫ ರವರು ಆರೋಪಿಗಳ ಪರ ಪಾಟೀಸವಾಲಿನಲ್ಲಿ ನಿಪಿ-೮(ಎ) ಅಲ್ಲಿ ಶಾಲೆಗೆ ದಾಖಲಾದ ದಿನಾಂಕಃ ೩೦.೦೫.೨೦೦೫ ಎಂದು ಇರುತ್ತದೆ. ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸುವಾಗ ಜನನ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಹಾಜರು ಪಡಿಸಬೇಕಾಗಿದೆ. ಈ ಮೊದಲು ಪೋಷಕರು ತಿಳಿಸುವ ಜನನ ದಿನಾಂಕಗಳನ್ನು ನಮೂದು ಮಾಡಿಕೊಳ್ಳುತ್ತಿದ್ದೆವು. ಯಾವುದಾದರೂ ದಾಖಲೆಗಳನ್ನು ನೀಡಬೇಕಾದರೆ ನಮಗೆ ಅರ್ಜಿ ಸಲ್ಲಿಸಬೇಕು ಎಂದರೆ ಸರಿ. ನಿಪಿ-೩ ನ್ನು ಮಂಜೂರು ಮಾಡುವ ಮೊದಲು ಯಾವುದಾದರೂ ಅರ್ಜಿಗಳು ಸಲ್ಲಿಕೆಯಾಗಿತ್ತೇ ಎಂದು ನನಗೆ ಮಾಹಿತಿ ಇಲ್ಲ. ದಿನಾಂಕಃ ೦೨.೦೫.೨೦೧೬ ಬೇಸಿಗೆ ರಜೆಯ ದಿನ ಎಂದರೆ ಸರಿ. ಈ ದಿನ ನಾನು ಹಾಜರು ಪಡಿಸಿರುವ ಶಾಲಾ ದಾಖಲೆಯ ರಿಜಿಸ್ಟರ್ ಹಾಗೂ ಅದರ ದೃಡೀಕೃತ ಪ್ರತಿ ಹೊರತು ಪಡಿಸಿ ಈ ಪ್ರಕರಣದ ಬಗ್ಗೆ ಬೇರೆ ಮಾಹಿತಿಗಳು ನನಗೆ ಖುದ್ದಾಗಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

೪೦. ಪ್ರಾಸಾ೫ರವರ ಸಾಕ್ಷ್ಯವನ್ನು ಗಮನಿಸಿದಾಗ ನಿಪಿ೩ ದಾಖಲೆಯ ನೈಜತೆಯ ಬಗ್ಗೆ ಆರೋಪಿಗಳು ವ್ಯಕ್ತಪಡಿಸಿರುವ ತಕರಾರುಗಳು ಆಧಾರರಹಿತ ತಕರಾರುಗಳೆಂಬುದು ಸ್ಪಷ್ಟವಾಗುತ್ತದೆ. ನಿಪಿ೮ರಲ್ಲಿ ಕು.ಸುಧಾರವರ ಜನ್ಮ ದಿನಾಂಕವನ್ನು ೦೮.೦೧.೨೦೦೦ ಎಂದು ನಮೂದಿಸಲಾಗಿದೆ. ಕು.ಸುಧಾರವರ ಜನ್ಮ ದಿನಾಂಕ ೦೮.೦೧.೨೦೦೦ ಎಂದು ನಮೂದಾಗಿರುವುದು ತಪ್ಪು ಮಾಹಿತಿಯಾಗಿರುತ್ತದೆ ಎಂದು ರುಜುವಾತುಪಡಿಸಲು ಆರೋಪಿಗಳು ಬೇರೆ ಯಾವುದೇ ಅಧಿಕೃತ ದಾಖಲೆಯನ್ನು ಸಲ್ಲಿಸಿರುವುದಿಲ್ಲ. ನಿಪಿ೩ ದಾಖಲೆಯು ನೈಜ ದಾಖಲೆಯಲ್ಲವೆಂದು ಪ್ರತಿಪಾದಿಸುವ ಸಲುವಾಗಿ ಪ್ರಾಸಾ೨ರವರು ನಿಪಿ೩

ದಾಖಲೆಯನ್ನು ಮಂಜೂರು ಮಾಡಲು ಅರ್ಜಿಸಲ್ಲಿಸಿರುವುದಿಲ್ಲ ಎಂದು ಆರೋಪಿಗಳು ವ್ಯಕ್ತಪಡಿಸಿರುವ ತಕರಾರು ಪ್ರಾಸಾ೫ರವರ ಸಾಕ್ಷ್ಯದ ಮೂಲಕ ನಿರಾಧಾರವಾದ ತಕರಾರು ಎಂಬ ಸಂಗತಿಯು ಸ್ಪಷ್ಟವಾಗುತ್ತದೆ. ಆದ ಕಾರಣ ಕು.ಸುಧಾರವರ ಜನ್ಮ ದಿನಾಂಕವು ೦೮.೦೧.೨೦೦೦ ಎಂದು ಕು.ಸುಧಾರವರು ದಿ.೦೨.೦೫.೧೯೯೨ರಂದು ೧೬ವರ್ಷ ೦೩ ತಿಂಗಳು ೨೪ ದಿನ ಪ್ರಾಯದವರಾಗಿದ್ದು ಅಪ್ರಾಪ್ತ ವಯಸ್ಕರಾಗಿದ್ದರೆಂಬ ಸಂಗತಿಯನ್ನು ರುಜುವಾತುಪಡಿಸಲು ಅಭಿಯೋಜನೆಯು ಸಫಲವಾಗಿದೆ.

೪೧. ಒಂದನೇ ಆರೋಪಿ ಶ್ರೀ ಎಂ ಮಹಾದೇವಸ್ವಾಮಿ @ ಮಹೇಶರವರು ದಿ.೦೨.೦೫.೧೬ರಂದು ೧೮ ವರ್ಷ ಪ್ರಾಯದವರಾಗಿದ್ದರು ಎಂಬ ಸಂಗತಿಯನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಸೂರಾಪುರದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರಾದ ಶ್ರೀ ತಿಮ್ಮರಾಜುರವನ್ನು ಪ್ರಾಸಾ೬ಎಂದು ವಿಚಾರಣೆ ಮಾಡಿರುತ್ತದೆ. ಪ್ರಾಸಾ-೬ ಶ್ರೀ ತಿಮ್ಮರಾಜು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಕೊಳ್ಳೇಗಾಲ ತಾಲ್ಲೂಕು ಗುಂಡಿಮಾಳ ಗ್ರಾಮದ ಮಾದೇಶ ಹಾಗೂ ಬಸಮ್ಮರವರ ಮಗನಾದ ಎಂ ಮಹಾದೇವಸ್ವಾಮಿಯವರು ನಮ್ಮ ಶಾಲೆಯಲ್ಲಿ ಪ್ರವೇಶ ಸಂಖ್ಯೆ ೭೧/೨೦೦೮-೦೯ ರ ರೀತ್ಯಾ ದಾಖಲಾಗಿರುತ್ತಾರೆ. ಅವರಿಗೆ ಸಂಬಂಧಿಸಿದ ಶಾಲಾ ದಾಖಲಾತಿ ರಿಜಿಸ್ಟರ್ ನಿಪಿ-೯ನ್ನು ಹಾಜರು ಪಡಿಸಿದ್ದೇನೆ ಹಾಗೂ ಅದರ ದೃಡೀಕೃತ ಪ್ರತಿಯನ್ನೂ ಸಹಾ ಹಾಜರು ಪಡಿಸಿರುತ್ತೇನೆ, ನಿಪಿಃ ೯ ರಂತೆ ಮಾದೇಶರವರ ಜನ್ಮ ದಿನಾಂಕಃ ೧೦.೦೫.೧೯೯೨ ಆಗಿರುತ್ತದೆ ಎಂದು ನುಡಿದಿರುತ್ತಾರೆ.

೪೨. ಪ್ರಾಸಾ-೬ ರವರು ಆರೋಪಿಗಳ ಪರ ಪಾಟೀಸವಾಲಿನಲ್ಲಿ ನಮ್ಮ ಶಾಲೆಯಿಂದ ಯಾವುದಾದರೂ ದಾಖಲಾತಿಗಳ ಪ್ರತಿ ತೆಗೆದುಕೊಳ್ಳಬೇಕಾದರೆ ಅರ್ಜಿ

ಸಲ್ಲಿಸಬೇಕೆಂದರೆ ಸರಿ. ನ್ಯಾಯಾಲಯದ ಆದೇಶದಂತೆ ನಿಪಿ: ೯ ರಂತೆ ಶಾಲಾ ದಾಖಲಾತಿ ರಿಜಿಸ್ಟರ್ ಅನ್ನು ಹಾಜರು ಪಡಿಸಿ ಸಾಕ್ಷ್ಯ ನುಡಿಯುತ್ತಿರುವುದನ್ನು ಹೊರತುಪಡಿಸಿ ನನಗೆ ಈ ಪ್ರಕರಣದ ಬಗ್ಗೆ ಬೇರೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

೪೩. ಅಭಿಯೋಜನೆಯು ದಂಡ ಪ್ರಕ್ರಿಯಾ ಸಂಹಿತೆ ವಿಧಿ ೩೧೧ ಹಾಗೂ ೯೧ರಡಿ ಅರ್ಜಿ ಸಲ್ಲಿಸಿ ಪ್ರಾಸಾ೬ರವರಿಗೆ ದಾಖಲೆಯನ್ನು ಹಾಜರುಪಡಿಸಿ ಸಾಕ್ಷ್ಯ ನುಡಿಯುವಂತೆ ಮನವಿ ಮಾಡಿರುತ್ತದೆ. ಆರೋಪಿಗಳು ಸದರಿ ಅರ್ಜಿಯನ್ನು ಪುರಸ್ಕರಿಸಲು ತಮ್ಮ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ. ಪ್ರಾಸಾ೬ರವರು ನ್ಯಾಯಾಲಯದ ಆದೇಶದಂತೆ ಹಾಜರಾಗಿ ನಿಪಿ೯ ಮತ್ತು ನಿಪಿ೯ಎ ಯನ್ನು ಹಾಜರುಪಡಿಸಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿಗಳು ನಿಪಿ೯ರಲ್ಲಿ ಶಾಲಾ ಪ್ರವೇಶಾತಿ ಸಂಖ್ಯೆ ೭೧/೦೮-೦೯ರಲ್ಲಿ ನಮೂದಿಸಿರುವ ಸಂಗತಿಗಳು ಒಂದನೇ ಆರೋಪಿಗೆ ಸಂಬಂಧಪಟ್ಟಿರುವುದಿಲ್ಲ ಹಾಗೂ ಒಂದನೇ ಆರೋಪಿಯ ಜನ್ಮ ದಿನಾಂಕ ೧೦.೦೫.೧೯೯೨ ಆಗಿರುವುದಿಲ್ಲವೆಂದು ಪ್ರತಿಪಾದನೆಯನ್ನು ಮಾಡಿರುವುದಿಲ್ಲ ಹಾಗೂ ಪ್ರಾಸಾ೬ರವರ ಸಾಕ್ಷ್ಯವನ್ನು ಅಲ್ಲಗೆಳೆದಿರುವುದಿಲ್ಲ. ಆದ ಕಾರಣ ಒಂದನೇ ಆರೋಪಿಯ ಜನ್ಮ ದಿನಾಂಕವು ೧೦.೦೫.೧೯೯೨ ಎಂದು ಒಂದನೇ ಆರೋಪಿಯು ದಿ.೦೨.೦೫.೧೯೯೨ರಂದು ೨೩ವರ್ಷ ೧೧ ತಿಂಗಳು ೨೨ ದಿನ ಪ್ರಾಯದವರಾಗಿದ್ದರೆಂದು ರುಜುವಾತುಪಡಿಸಲು ಅಭಿಯೋಜನೆಯು ಸಫಲವಾಗಿದೆ.

೪೪. ಪ್ರಾಸಾ೧ರವರು ಆರೋಪಿಗಳ ಪರ ಪಾಟೀ ಸವಾಲಿನಲ್ಲಿ ನಮ್ಮ ಸ್ವಾಂತನ ಕೇಂದ್ರಕ್ಕೆ ಯಾರಾದರೂ ಬಾಲ್ಯ ವಿವಾಹದ ಬಗ್ಗೆ ದೂರು ಕೊಟ್ಟಿರುತ್ತಾರೆ. ಆ ದೂರಿನೊಂದಿಗೆ ಮದುವೆ ಕರೆಯೋಲೆ ಸಹ ಕೊಟ್ಟಿರುತ್ತಾರೆ. ಚಾಸಾ೩ರವರನ್ನು ನನ್ನ ಕಛೇರಿಗೆ ಕರೆಸಿದ್ದೆ. ಆಗ ಅವರು ದೂರು ಬಂದಿರುವುದಾಗಿ ತಿಳಿಸಿ ನಿಪಿ೫ನ್ನು ತೋರಿಸಿದರು. ಆಗ ಸಮಯ ೧೦-

೧೫ಘಂಟೆ ಆಗಿತ್ತು. ನಿಪಿ೫ನ್ನು ಚಾಸಾ೩ ನನಗೆ ಕೊಟ್ಟರು. ನಾನು ಅದನ್ನು ಚಾಸಾ೯ರವರಿಗೆ ಕೊಟ್ಟೆ ಎಂದು ನುಡಿದಿರುತ್ತಾರೆ.

**೪೫.** ಚಾಸಾ೯/ಪ್ರಾಸಾ೪ರವರು ನಿಪಿ೧ ರಂತೆ ಮಹಜರ್ ಕ್ರಮ ಜರುಗಿಸಿ ನಿಪಿ೫ ಮದುವೆಯ ಕರೆಯೋಲೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

**೪೬.** ನಿಪಿ೫ ಕು.ಸುಧಾ ಹಾಗೂ ಒಂದನೇ ಆರೋಪಿ ಶ್ರೀ ಮಹಾದೇವಸ್ವಾಮಿ @ ಮಹೇಶ್‌ರವರ ಮದುವೆಯ ಕರೆಯೋಲೆಯಾಗಿರುತ್ತದೆ. ಕು.ಸುಧಾರವರ ತಾತ ಮತ್ತು ಅಜ್ಜಿಯಾಗಿರುವ ಶ್ರೀಮತಿ ಪುಟ್ಟಬಸಮ್ಮ ಮತ್ತು ಶ್ರೀ ರಂಗಶೆಟ್ಟಿ ಇವರ ಹೆಸರಿನಲ್ಲಿ ನಿಪಿ೫ ಮದುವೆಯ ಕರೆಯೋಲೆಯನ್ನು ಮುದ್ರಿಸಲಾಗಿದೆ. ಪ್ರಾಸಾ೪ರವರು ಆರೋಪಿಗಳ ಪರ ಪಾಟೀ ಸವಾಲಿನಲ್ಲಿ ನಿಪಿ೫ ಲಗ್ನ ಪತ್ರಿಕೆಯನ್ನು ಯಾವ ಮುದ್ರಣಾಲಯದಲ್ಲಿ ಮುದ್ರಿಸಿರುತ್ತಾರೆ ಎಂದು ಅರೋಪಿಗಳನ್ನು ವಿಚಾರಿಸಿದಾಗ ಅವರು ಮಾಹಿತಿ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾ೧ ಮತ್ತು ಪ್ರಾಸಾ೨ರವರು ಆರೋಪಿಗಳ ಪರ ಪಾಟೀ ಸವಾಲಿನಲ್ಲಿ ಆರೋಪಿತ ಘಟನೆಗೆ ಮೊದಲು ಆರೋಪಿಗಳನ್ನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾ೧ರವರ ಪಾಟೀ ಸವಾಲಿನಲ್ಲಿ ಆರೋಪಿಗಳು ಪ್ರಾಸಾ೧ರವರೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಸೃಷ್ಠಿಸಿ ಹಾಜರುಪಡಿಸಿರುವುದಾಗಿ ಸಲಹೆ ನೀಡಿರುತ್ತಾರೆ. ಆರೋಪಿಗಳು ನಿಪಿ೫ರಲ್ಲಿ ನಮೂದಿಸಿರುವ ವ್ಯಕ್ತಿಗಳ ಹೆಸರು ವಿಳಾಸಗಳನ್ನಾಗಲಿ ಮದುವೆ ಹಾಗೂ ಇತರ ಧಾರ್ಮಿಕ ಕಾರ್ಯಗಳ ವಿವರಗಳನ್ನಾಗಲಿ ಮದುವೆಯ ಸ್ಥಳ, ದಿನ, ದಿನಾಂಕ ಇತರ ವಿವರಗಳನ್ನಾಗಲಿ ಅಲ್ಲಗೆಳೆದಿರುವುದಿಲ್ಲ. ಆರೋಪಿಗಳ ಪೂರ್ವಪರಿಚಯವೇ ಇಲ್ಲದ ಪ್ರಾಸಾ೧ರವರು ಈ ಪ್ರಕರಣದ ಸಲುವಾಗಿ ದಾಖಲೆಗಳನ್ನು ಸೃಷ್ಠಿಸಿ ಹಾಜರುಪಡಿಸಿರುತ್ತಾರೆಂಬ ಆರೋಪಿಗಳ ಪ್ರತಿಪಾದನೆಯು ಆಧಾರ ರಹಿತ

ತರ್ಕಹೀನ ಪ್ರತಿಪಾದನೆಯಾಗಿದೆ. ನಿಪಿ೫ನ್ನು ಮುದ್ರಿಸಿದ ಮುದ್ರಣಾಲಯದ ಹೆಸರು ನಿಪಿ೫ರಲ್ಲಿ ನಮೂದಾಗಿರುವುದಿಲ್ಲ. ಆರೋಪಿಗಳು ಮುದ್ರಣಾಲಯದ ಹೆಸರನ್ನು ತಿಳಿಸದಿರುವ ಕಾರಣ ಪ್ರಾಸಾ೪ರವರು ಮುದ್ರಣಾಲಯದ ಮಾಲೀಕರನ್ನು ಪತ್ತೆ ಮಾಡಲು ಸಾಧ್ಯವಾಗಿರುವುದಿಲ್ಲವೆಂಬ ಸಂಗತಿಯು ನಿಪಿ೫ ಮದುವೆಯ ಕರೆಯೋಲೆಯ ನೈಜತೆಯನ್ನು ರುಜುವಾತುಪಡಿಸಲು ಅಭಿಯೋಜನೆಗೆ ಅಡ್ಡಿಯಾಗುವುದಿಲ್ಲ.

೪೭. ನಿಪಿ೫ ಮದುವೆಯ ಕರೆಯೋಲೆಯಲ್ಲಿರುವ ವಿವರಗಳನ್ನು ಪರಿಶೀಲಿಸಿದಾಗ ಕು.ಸುಧಾ ಮತ್ತು ಒಂದನೇ ಆರೋಪಿಯ ಮದುವೆಯ ಸಂಬಂಧವಾಗಿ ದಿ.೧೧.೦೫.೧೬ರಂದು ಭಾನುವಾರ ಬೆ.೭-೦೦ರಿಂದ ೮-೦೦ಘಂಟೆ ಅವಧಿಯಲ್ಲಿ ಸ್ಥಂಭ ಮಹೂರ್ತ, ದಿ.೦೨.೦೫.೨೦೧೬ರಂದು ಬೆ.೧೦-೦೦ರಿಂದ ೧೧-೦೦ಘಂಟೆ ಅವಧಿಯಲ್ಲಿ ಧಾರಾ ಮಹೂರ್ತ ಹಾಗೂ ಮಧ್ಯಾಹ್ನ ೧೨-೦೦ಘಂಟೆಗೆ ಆರತಿ-ಅಕ್ಷತೆ ನಿಗದಿಯಾಗಿರುವುದು ಕಂಡು ಬರುತ್ತದೆ. ಪ್ರಾಸಾ೧ ಪ್ರಾಸಾ೨ ಮತ್ತು ಪ್ರಾಸಾ೪ರವರ ಸಾಕ್ಷ್ಯವನ್ನು ಹಾಗೂ ನಿಪಿ೫ ಗಮನಿಸಿದಾಗ ದಿ.೦೨.೦೫.೧೬ರಂದು ಪ್ರಾಸಾ೧ ಹಾಗೂ ಅವರ ಸಿಬ್ಬಂದಿ ಪ್ರಾಸಾ೪ ಮತ್ತು ಅವರ ಸಿಬ್ಬಂದಿ ಶ್ರೀ ಮಹದೇಶ್ವರ ಕಲ್ಯಾಣ ಮಂಟಪಕ್ಕೆ ಭೇಟಿ ನೀಡಿ ತಪಾಸಣೆ ಮಾಡುವ ಸಮಯದಲ್ಲಿ ಒಂದನೇ ಆರೋಪಿ ಹಾಗೂ ಕು.ಸುಧಾರವರ ನಡುವೆ ಮದುವೆಯ ವಿಧಿಗಳು ಪೂರ್ಣಗೊಂಡಿದ್ದು ಆರತಿ-ಅಕ್ಷತೆ ನಡೆಯುತ್ತಿದ್ದ ಸಂಗತಿ ಸ್ಪಷ್ಟಪಡುತ್ತದೆ. ಪ್ರಾಸಾ೧ರವರು ಆರೋಪಿಗಳ ಪರ ಪಾಟೀ ಸವಾಲಿನಲ್ಲಿ ನಾನು ಕಲ್ಯಾಣ ಮಂಟಪಕ್ಕೆ ಹೋದಾಗ ಜನಜಂಗುಳಿ ಇತ್ತು, ಯಾವ ದೇವತಾ ಕಾರ್ಯ ನಡೆಯುತ್ತಿತ್ತು ಎಂದು ನೋಡಿರುವುದಿಲ್ಲವೆಂದು ನುಡಿದಿರುತ್ತಾರೆ. ಪ್ರಾಸಾ೨ರವರು ಆರೋಪಿಗಳ ಪರ ಪಾಟೀ ಸವಾಲಿನಲ್ಲಿ ನಾವು ಕಲ್ಯಾಣ ಮಂಟಪಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಮದುವೆ ಮುಗಿದು ರಿಸೆಪ್‌ಷನ್ ನಡೆಯುತ್ತಿತ್ತು ಎಂದು ನುಡಿದಿರುತ್ತಾರೆ.

ಪ್ರಾಸಾ೪ರವರು ಆರೋಪಿಗಳ ಪರ ಪಾಟೀ ಸವಾಲಿನಲ್ಲಿ ನಾವು ಕೃತ್ಯ ಸ್ಥಳಕ್ಕೆ ಹೋದಾಗ ಜನರೆಲ್ಲಾ ಇದ್ದರು ಮದುವೆಯ ಕಾರ್ಯಗಳು ನಡೆಯುತ್ತಿದ್ದವು. ನನ್ನ ತನಿಖಾ ಕಾಲದಲ್ಲಿ ಸದರಿ ಮದುವೆಯು ಹಿಂದೂ ಸಂಪ್ರದಾಯದಂತೆ ನಡೆಯುತ್ತಿರುವುದು ಕಂಡು ಬಂದಿತು ಎಂದು ನುಡಿದಿರುತ್ತಾರೆ. ಛಾಯ ಚಿತ್ರಗಳು ಹಾಗೂ ವಿಡೀಯೋ ಚಿತ್ರೀಕರಣವು ಅಭಿಯೋಜನೆಯ ಪ್ರತಿಪಾದನೆಯನ್ನು ಪುಷ್ಟೀಕರಿಸುವ ಸಾಕ್ಷ್ಯವಾಗಬಹುದೇ ಹೊರತು ತನ್ನಷ್ಟಕ್ಕೇ ತಾನೇ ಸ್ವಯಂ ಸಿದ್ದ (conclusive proof) ಆಗುವುದಿಲ್ಲ. ಪ್ರಾಸಾ೧ ಅಥವಾ ಪ್ರಾಸಾ೪ರವರು ಪ್ರಶ್ನಿತ ಮದುವೆಯ ಛಾಯ ಚಿತ್ರಗಳನ್ನು ತೆಗೆಸಿರುವುದಿಲ್ಲ ಹಾಗೂ ವಿಡಿಯೋ ಚಿತ್ರೀಕರಣ ಮಾಡಿರುವುದಿಲ್ಲ ಎಂಬ ಕಾರಣಕ್ಕಾಗಿ ಮದುವೆಯೇ ನಡೆದಿಲ್ಲವೆಂಬ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ.

೪೮. ಪ್ರಾಸಾ೧, ಪ್ರಾಸಾ೨ ಮತ್ತು ಪ್ರಾಸಾ೪ವರ ಪಾಟೀ ಸವಾಲಿನಲ್ಲಿ ಆರೋಪಿಗಳು ಪ್ರತಿಪಾದಿಸಿದ ಸಂಗತಿಗಳನ್ನು ಗಮನಿಸಿದಾಗ ಪ್ರಶ್ನಿತ ಸಮಯ, ಸಂದರ್ಭ, ದಿನ ದಿನಾಂಕಗಳಂದು ಆರೋಪಿ೧ರಿಂದ ೫ರವರು ಸದರಿ ಸ್ಥಳದಲ್ಲಿ ಪ್ರತ್ಯಕ್ಷ ಹಾಜರಿದ್ದರೆಂಬ ಬಗ್ಗೆ ಯಾವುದೇ ಸಂಶಯ ಬರುವು ದಿಲ್ಲ. ಪ್ರಾಸಾ೧ ಮತ್ತು ಪ್ರಾಸಾ೨ರವರು ಮದುವೆಯ ವಿಧಿ ವಿಧಾನಗಳ ಬಗ್ಗೆ ವಿವರವಾಗಿ ನುಡಿದಿರುವುದಿಲ್ಲವೆಂಬ ಮಾತ್ರಕ್ಕೆ ಆರೋಪಿತ ವಿವಾಹ ನಡೆ ದಿಲ್ಲವೆಂಬ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಕು.ಸುಧಾ ಹಾಗೂ ಒಂದನೆ ಆರೋಪಿ ಶ್ರೀ ಮಹದೇವಸ್ವಾಮಿ @ ಮಹೇಶರವರ ನಡುವೆ ದಿ.೦೨.೦೫.೧೬ರಂದು ನಡೆದಿರುವ ವಿವಾಹವು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ರ ವಿಧಿ ೩ರ ರೀತ್ಯ ಅಪ್ರಾಪ್ತ ವಯಸ್ಕರಾಗಿದ್ದ ಕು.ಸುಧಾರವರ ಆಯ್ಕೆಯಂತೆ ಶೂನ್ಯಕರಣೀಯವಾದ ವಿವಾಹವಾಗಿರುವ ಕಾರಣ ಮೇಲ್ಕಂಡ

ವಿವಾಹದ ವಿಧಿ ವಿಧಾನಗಳ ಬಗ್ಗೆ ಅಭಿಯೋಜನೆಯು ವಿವರವಾದ ಸಾಕ್ಷ್ಯ ಮಂಡಿಸಿಲ್ಲವೆಂಬ ಪ್ರತಿಪಾದನೆಯು ಮಹತ್ವದ್ದಾಗಿರುವುದಿಲ್ಲ.

೪೯. ಪಿರ್ಯಾದಿ ಕೈಗೊಂಡಿರುವ ಬಾಲ್ಯ ವಿವಾಹ ತಡೆ ಕಾರ್ಯಾಚರಣೆಯಲ್ಲಿ ಹಾಗೂ ತನಿಖಾಧಿಕಾರಿಯ ತನಿಖೆಯಲ್ಲಿ ಮತ್ತು ಅಭಿಯೋಜನೆಯ ಸಾಕ್ಷ್ಯದಲ್ಲಿ ಸಣ್ಣ ಪುಟ್ಟ ಲೋಪದೋಷಗಳು ಕಂಡು ಬಂದರೂ ಸಹ ಅಭಿಯೋಜನೆಯ ಪ್ರಕರಣವನ್ನು ಸಾರಾಸಗಟಾಗಿ ನಿರಾಕರಿಸುವಷ್ಟು ಪ್ರಾಮುಖ್ಯವನ್ನು ಹೊಂದಿರುವುದಿಲ್ಲ.

೫೦. ಅಭಿಯೋಜನೆಯು ಮಂಡಿಸಿರುವ ಸಾಕ್ಷ್ಯವನ್ನು ಸಮಗ್ರವಾಗಿ ಪರಿಗಣಿಸಿದಾಗ ದಿ.೦೨.೦೫.೧೬ರಂದು ಕೊಳ್ಳೇಗಾಲದ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಒಂದನೇ ಆರೋಪಿ ಶ್ರೀ ಮಹದೇವಸ್ವಾಮಿ@ ಮಹೇಶರವರು ಅಪ್ರಾಪ್ತ ವಯಸ್ಕರಾಗಿದ್ದ ಕು.ಸುಧಾರವರನ್ನು ಮದುವೆಯಾಗಿರುತ್ತಾರೆ ಹಾಗೂ ಆರೋಪಿ೨ ರಿಂದ ೪ ರವರು ಸದರಿ ಬಾಲ್ಯ ವಿವಾಹವನ್ನು ನೆರವೇರಿಸಿರುತ್ತಾರೆ ಎಂಬ ಅಂಶಗಳನ್ನು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆ ಇಲ್ಲದಂತೆ ರುಜುವಾತು ಪಡಿಸಿರುವುದು ಸ್ಪಷ್ಟವಾಗುತ್ತದೆ. ಆದ ಕಾರಣ ಅಂಶ ೧ ಮತ್ತು ೨ನ್ನು **ಸಕಾರಾತ್ಮಕವಾಗಿ** ಉತ್ತರಿಸುತ್ತೇನೆ.

೫೧. **ಅಂಶ ೩ ಮತ್ತು ೪ :** ಈ ಎರಡೂ ಅಂಶಗಳು ಅಂತರ್ಗತ ಸಂಬಂಧ ಹೊಂದಿರುವ ಕಾರಣ ಒಟ್ಟಾಗಿಯೇ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಆರೋಪಿ ೫ ಶ್ರೀ ಸೋಮಣ್ಣರವರು ತಾವು ಆರೋಪಿತ ಘಟನೆಯ ದಿ ನಾಂಕದಂದು ಶ್ರೀ ಮಹದೇಶ್ವರ ಕಲ್ಯಾಣ ಮಂಟಪದ ವ್ಯವಸ್ಥಾಪಕರಾಗಿರಲಿಲ್ಲವೆಂದು ವಿಫಲ ಪ್ರತಿಪಾದನೆ ಮಾಡಿರುತ್ತಾರೆ. ೫ನೇ ಆರೋಪಿಯು ಗೌರವಾನ್ವಿತ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ) ಇವರ ನ್ಯಾಯಾಲಯದಲ್ಲಿ ಕ್ರಿಮಿಸ್ ನಂ:೫೧೪೬/೨೦೧೭ರಂತೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿ ದಿ.೨೮.೦೮.೨೦೧೭ರ ಆದೇಶದಂತೆ ನಿರೀಕ್ಷಣಾ ಜಾಮೀನು ಪಡೆದುಕೊಂಡಿರುತ್ತಾರೆ. ಸದರಿ ಪ್ರಕರಣದಲ್ಲಿ ತಾವು ದಿ.೦೨.೦೫.೧೬ರಂದು ಶ್ರೀ ಮಹದೇಶ್ವರ ಕಲ್ಯಾಣ ಮಂಟಪದ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದುದಾಗಿ ಪ್ರತಿಪಾದಿಸಿರುತ್ತಾರೆ. ಆದ ಕಾರಣ ೫ನೇ ಆರೋಪಿಯು ದಿ.೦೨.೦೫.೧೬ರಂದು ಕೊಳ್ಳೇಗಾಲದ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದ ವ್ಯವಸ್ಥಾಪಕರಾಗಿದ್ದರು ಎಂಬ ಸಂಗತಿ ವಿವಾದಾತೀತವಾಗಿರುತ್ತದೆ.

೫೨. ೫ನೇ ಆರೋಪಿಯು ತಾವು ಯಾವ ವಿಧದಲ್ಲೂ ಆರೋಪಿತ ಬಾಲ್ಯವಿವಾಹವನ್ನು ಪ್ರೋತ್ಸಾಹಿಸಿರುವುದಿಲ್ಲ ಎಂದು ಪ್ರತಿಪಾದಿಸಿರುತ್ತಾರೆ. ಪ್ರಾಸಾ೨ರವರು ನಿಪಿ೨ ದೂರಿನಲ್ಲಿ ಸದರಿ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದ ವ್ಯವಸ್ಥಾಪಕರಾದ ಸೋಮಣ್ಣರವರನ್ನು ಕಂಡು ವಿಚಾರ ಮಾಡಿದಾಗ ಸದರಿ ಮದುವೆಯಾಗುವ ಅಪ್ರಾಪ್ತ ವಯಸ್ಕಳಾದ ಆರ್.ಸುಧಾ ರವರು ೮.೧೧.೧೯೯೭ ಎಂದು ಜನಿಸಿದಳು ಅವಳಿಗೆ ೧೮ ವರ್ಷವಾಗಿದೆ ಎಂದು ನೋಟರಿ ಅವರಿಂದ ಪಡೆದಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸಿದರು. ಸದರಿ ಪ್ರಮಾಣ ಪತ್ರದಲ್ಲಿ ಎನ್.ಕೃಷ್ಣ ಬಿ.ಎ., ಎಲ್ ಎಲ್.ಬಿ., ಯಳಂದೂರುರವರು ಪ್ರಮಾಣ ಪತ್ರವನ್ನು ಕೊಟ್ಟಿರುವ ಬಗ್ಗೆ ವಿವರವಿತ್ತು ಎಂದು ತಿಳಿಸಿರುತ್ತಾರೆ. ಪ್ರಾಸಾ೨ರವರು ಸದರಿ ಪ್ರಮಾಣಪತ್ರವನ್ನು ನಿಪಿ೪ಎಂದು ಗುರುತಿಸಿರುತ್ತಾರೆ. ಅಭಿಯೋಜನೆಯ ಸಾಕ್ಷ್ಯ ಹಾಗೂ ೫ನೇ ಆರೋಪಿಯ ಅಭಿರಕ್ಷೆಯನ್ನು ಗಮನಿಸಿದಾಗ ೫ನೇ ಆರೋಪಿಯು ನಿಪಿ೪ ಪ್ರಮಾಣ ಪತ್ರವನ್ನು ನಾಲ್ಕನೇ ಆರೋಪಿಯಿಂದ ಪಡೆದುಕೊಂಡು ಕು.ಸುಧಾರವರ ಮದುವೆಗೆ ಅವಕಾಶ ನೀಡಿರುವ ಸಾಧ್ಯತೆ ಕಂಡು ಬರುತ್ತದೆ. ನಿಪಿ೪ ಪ್ರಮಾಣ ಪತ್ರವನ್ನು ಕು.ಸುಧಾರವರ ತಂದೆ ರಂಗಶೆಟ್ಟಿಯವರ ಮಗ

ರಾಜುರವರು ದಿ.೨೩.೧೨.೨೦೧೫ರಂದು ೭ನೇ ಆರೋಪಿ ಶ್ರೀ ಕೃಷ್ಣರವರ ಸಮಕ್ಷಮ ಪ್ರಮಾಣೀಕರಿಸಿ ತಮ್ಮ ಮಗಳು ಸುಧಾಳ ಜನ್ಮ ದಿನಾಂಕ:೦೮.೧೧.೧೯೯೭ ಎಂದು ತಿಳಿಸಿರುತ್ತಾರೆ. ನಿಪಿ೪ರಲ್ಲಿ ತಿಳಿಸಿರುವ ಕು.ಸುಧಾರವರ ಜನ್ಮ ದಿನಾಂಕವನ್ನು ಪರಿಗಣಿಸಿದಲ್ಲಿ ದಿ.೦೨.೦೫.೧೬ರಂದು ಕು.ಸುಧಾರವರ ವಯಸ್ಸು ೧೮ವರ್ಷ ೫ತಿಂಗಳು ೨೪ದಿನಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ೫ನೇ ಆರೋಪಿಯು ತಮ್ಮ ಕಲ್ಯಾಣ ಮಂಟಪದಲ್ಲಿ ಕು.ಸುಧಾ ಹಾಗೂ ಒಂದನೆ ಆರೋಪಿಯ ಮದುವೆಗೆ ಅವಕಾಶ ಮಾಡಿಕೊಟ್ಟಿರುವುದು ವ್ಯಕ್ತವಾಗುತ್ತದೆ. ೫ನೇ ಆರೋಪಿಯು ನಿಪಿ೪ರಲ್ಲಿ ನಮೂದಿಸಿರುವ ಸಂಗತಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಅವಕಾಶವನ್ನು ಹೊಂದಿದ್ದರು ಸಹ ಉದ್ದೇಶಪೂರ್ವಕವಾಗಿ ಬಾಲ್ಯ ವಿವಾಹ ನಡೆಯಲು ತಮ್ಮ ಕಲ್ಯಾಣ ಮಂಟಪದಲ್ಲಿ ಅವಕಾಶ ಮಾಡಿಕೊಟ್ಟಿರುತ್ತಾರೆಂದು ಅಭಿಯೋಜನೆಯು ಆರೋಪಿಸಿರುವುದಿಲ್ಲ. ೧ರಿಂದ ೪ನೇ ಆರೋಪಿಗಳು ೫ನೇ ಆರೋಪಿಗೆ ನಿಜ ಸಂಗತಿಯನ್ನು ತಿಳಿಸದೆ ಕು.ಸುಧಾರವರ ನಿಜವಾದ ವಯಸ್ಸನ್ನು ಮರೆಮಾಚಿ ನಿಪಿ೪ನ್ನು ಹಾಜರು ಪಡಿಸಿ ೫ನೇ ಆರೋಪಿಯವರು ವ್ಯವಸ್ಥಾಪಕರಾಗಿದ್ದ ಶ್ರೀ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಬಾಲ್ಯವಿವಾಹವನ್ನು ನೆರವೇರಿಸಿರುವುದು ಸ್ಪಷ್ಟವಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ೫ನೇ ಆರೋಪಿಯು ಪ್ರಶ್ನಿತ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸಿರುತ್ತಾರೆಂಬ ಅಭಿಯೋಜನೆಯ ಆರೋಪವು ಸಹಜ ಸಂಶಯಗಳಿಗೆ ಎಡೆ ಇಲ್ಲದಂತೆ ರುಜುವಾತಾಗಿರುವುದಿಲ್ಲ.

೫೩. ೭ನೇ ಆರೋಪಿ ಶ್ರೀ ಕೃಷ್ಣರವರು ಅಭಿಯೋಜನೆಯ ಸಾಕ್ಷಿಗಳ ಪಾಟೀ ಸವಾಲಿನಲ್ಲಿ ಹಾಗೂ ದಂಡ ಪ್ರಕ್ರಿಯಾ ಸಂಹಿತೆ ವಿಧಿ ೩೧೩(೧)(ಬಿ)ಯಡಿ ದಾಖಲಿಸಿದ ತಮ್ಮ ಹೇಳಿಕೆಯಲ್ಲಿ ಕು.ಸುಧಾರವರ ತಂದೆ ಸುಧಾರವರ ಏಳನೇ ತರಗತಿ ಮಾರ್ಕ್ಸ್ ಕಾರ್ಡ್ ಝೆರಾಕ್ಸ ಪ್ರತಿ ನೀಡಿದ್ದರು ಅದರಂತೆ ಅಫಿಡವಿಟ್ ಮಾಡಿಕೊಟ್ಟಿದ್ದೇನೆ ಎಂದು ಪ್ರತಿಪಾದನೆ ಮಾಡಿರುತ್ತಾರೆ.

೫೪. ಪ್ರಾಸಾ೧ರವರು ೭ನೇ ಆರೋಪಿಯ ಪರ ಪಾಟೀ ಸವಾಲಿನಲ್ಲಿ ನಿಪಿಳರಲ್ಲಿ ರಂಗಶೆಟ್ಟಿಯವರ ಮಗ ರಾಜು ತಮ್ಮ ಮಗಳು ಆರ್ ಸುಧಾಳ ಮದುವೆಯ ಸಲುವಾಗಿ ಜನ್ಮ ದಿನಾಂಕವನ್ನು ಪ್ರಮಾಣೀಕರಿಸುತ್ತಿರುವುದಾಗಿ ತಿಳಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿಳರಲ್ಲಿ ಆರ್ ಸುಧಾರವರು ಯಾವ ತರಗತಿಯಲ್ಲಿ ಓದುತ್ತಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

೫೫. ಪ್ರಾಸಾ೨ರವರು ೭ನೇ ಆರೋಪಿ ಪರ ಪಾಟೀ ಸವಾಲಿನಲ್ಲಿ ನೋಟರಿ ದೃಢೀಕೃತ ಪ್ರಮಾಣ ಪತ್ರದಲ್ಲಿ ಮದುವೆಯ ಉದ್ದೇಶಕ್ಕಾಗಿ ವಯಸ್ಸನ್ನು ದೃಢೀಕರಿಸುತ್ತಿರುವುದಾಗಿ ಬರೆದಿರುವುದಿಲ್ಲ. ನಿಪಿಳ ನೋಟರಿ ದೃಢೀಕೃತ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ನೋಟರಿಯವರನ್ನು ವಿಚಾರಣೆ ಮಾಡಿ ಅವರ ರಿಜಿಸ್ಟರ್‌ಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

೫೬. ಪ್ರಾಸಾಳರವರು ೭ನೇ ಆರೋಪಿ ಪರ ಪಾಟೀ ಸವಾಲಿನಲ್ಲಿ ನಿಪಿಳರಲ್ಲಿ ಮದುವೆಯ ಉದ್ದೇಶಕ್ಕಾಗಿ ಪ್ರಮಾಣಪತ್ರ ಪ್ರಮಾಣೀಕರಿಸುತ್ತಿರುವುದಾಗಿ ನಮೂದು ಮಾಡಿರುವುದಿಲ್ಲವೆಂದು ನುಡಿದಿರುತ್ತಾರೆ.

೫೭. ೭ನೇಆರೋಪಿಯು ತಾವು ನಿಪಿಳ ಪ್ರಮಾಣಪತ್ರವನ್ನು ದೃಢೀಕರಿಸಿಕೊಟ್ಟಿರುವುದಿಲ್ಲವೆಂದು ಪ್ರತಿಪಾದನೆ ಮಾಡಿರುವುದಿಲ್ಲ. ತಾವು ಕು.ಆರ್.ಸುಧಾರವರ ತಂದೆ ರಂಗಶೆಟ್ಟಿಯವರ ಮಗ ರಾಜು ನೀಡಿದ ಮಾಹಿತಿಯನ್ನು ಅನುಸರಿಸಿ ಪ್ರಮಾಣ ಪತ್ರವನ್ನು ದೃಢೀಕರಿಸಿರುವುದಾಗಿ ಪ್ರತಿಪಾದನೆ ಮಾಡಿರುತ್ತಾರೆ. ನಿಪಿಳರಲ್ಲಿ ರಂಗಶೆಟ್ಟಿಯವರ ಮಗ ರಾಜುರವರು ನನ್ನ ಮಗಳ ಹೆಸರು ಸುಧಾ ಹಾಗೂ ನನ್ನ ಮಗಳ ಜನ್ಮ ದಿನಾಂಕವು :

೦೮-೧೧-೧೯೯೭ ಆಗಿದ್ದು ಯರಿಯೂರು ಗ್ರಾಮದಲ್ಲಿ ವಾಸವಿದ್ದು ಸದರಿ ನನ್ನ ಮಗಳ ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ಮಗಳ ಜನ್ಮ ದಿನಾಂಕ ಹಾಗೂ ನನ್ನ ಮಗಳ ವಯಸ್ಸಿಗೆ ಸಂಬಂಧಿಸಿದಂತೆ ಈ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಯವರಲ್ಲಿ ಸಲ್ಲಿಸುವ ಅವಶ್ಯಕತೆ ಇದ್ದು, ಸದರಿ ಮೇಲೆ ತಿಳಿಸಿರುವಂತೆ ನನ್ನ ಮಗಳ ಜನ್ಮ ದಿನಾಂಕವು ಮೇಲಿನಂತೆ ಇದ್ದು ನನ್ನ ಮಗಳಿಗೆ ೧೮ ವರ್ಷಗಳು ಆಗಿರುತ್ತದೆಂದು ದೃಢಪಡಿಸುವ ಸಲುವಾಗಿ ಈ ಮೇಲಿನಂತೆ ಪ್ರಮಾಣೀಕರಿಸುತ್ತೇನೆ ಎಂದು ತಿಳಿಸಿರುತ್ತಾರೆ. ೭ನೇ ಆರೋಪಿಯು ರಾಜುರವರು ತಮ್ಮ ಮಗಳ ೭ನೇ ತರಗತಿಯ ಮಾರ್ಕ್ಸ್ ಕಾರ್ಡ್‌ನ ಝೇರಾಕ್ಸ ಪ್ರತಿಯನ್ನು ಹಾಜರುಪಡಿಸಿದ್ದರು ಅದನ್ನು ನೋಡಿ ಅಫಿಡವಿಟ್ ಮಾಡಿರುತ್ತೇನೆ ಎಂದು ತಿಳಿಸಿದ್ದರೂ ಸಹ ಸದರಿ ಮಾರ್ಕ್ಸ್ ಕಾರ್ಡ್‌ನ ಝೇರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ನಿಪಿ೪ರಲ್ಲಿ ಯಾವ ವಿಷಯಕ್ಕಾಗಿ ಯಾವ ಅಧಿಕಾರಿಯ ಮುಂದೆ ಹಾಜರುಪಡಿಸುವ ಸಲುವಾಗಿ ನಿಪಿ೪ರಂತೆ ಪ್ರಮಾಣ ಪತ್ರವನ್ನು ಪ್ರಮಾಣೀಕರಿಸಲಾಗುತ್ತಿದೆ ಎಂಬ ವಿವರಗಳು ಇರುವುದಿಲ್ಲ. ನಿಪಿ೪ರಲ್ಲಿ ತಿಳಿಸಿರುವ ಸಂಗತಿಗಳು ಅಸ್ಪಷ್ಟತೆಯಿಂದ ಕೂಡಿದೆ. ೭ನೇ ಆರೋಪಿಯು ನೋಟರಿ/ವಕೀಲರಾಗಿದ್ದು ನಿಪಿ೪ ಪ್ರಮಾಣ ಪತ್ರವನ್ನು ಪ್ರಮಾಣೀಕರಿಸುವ ಸಮಯದಲ್ಲಿ ರಾಜುರವರಿಂದ ಇನ್ನಷ್ಟು ಮಾಹಿತಿ ಪಡೆಯುವ ಪ್ರಯತ್ನ ಮಾಡಬಹುದಿತ್ತು. ಆದರೆ ೭ನೇ ಆರೋಪಿಯು ಯಾಂತ್ರಿಕವಾಗಿ ಪ್ರಮಾಣ ಪತ್ರವನ್ನು ಪ್ರಮಾಣೀಕರಿಸಿರುವುದು ವ್ಯಕ್ತವಾಗಿರುತ್ತದೆ. ೭ನೇ ಆರೋಪಿಯು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿರುವುದಿಲ್ಲವೆಂದು ಆಪಾದನೆ ಮಾಡಬಹುದೇ ಹೊರತು ನಿಪಿ೪ರಲ್ಲಿ ನಮೂದಿಸಿರುವ ಸಂಗತಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಅವಕಾಶವನ್ನು ಹೊಂದಿದ್ದರೂ ಉದ್ದೇಶಪೂರ್ವಕವಾಗಿ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸುವ ಸಲುವಾಗಿ ನಿಪಿ೪ನ್ನು ಪ್ರಮಾಣೀಕರಿಸಿರುತ್ತಾರೆಂದು

ಅಭಿಯೋಜನೆಯು ಆರೋಪಿಸಿರುವುದಿಲ್ಲ. ಕು.ಸುಧಾರವರ ತಂದೆ ರಂಗಶೆಟ್ಟಿಯವರ ಮಗ ರಾಜುರವರು ೭ನೇ ಆರೋಪಿಗೆ ನಿಜ ಸಂಗತಿಯನ್ನು ತಿಳಿಸದೆ ಕು.ಸುಧಾರವರ ನಿಜವಾದ ವಯಸ್ಸನ್ನು ಮರೆಮಾಚಿ ನಿಪಿಳರಂತೆ ಪ್ರಮಾಣ ಪತ್ರವನ್ನು ೭ನೇ ಆರೋಪಿಯಿಂದ ದೃಢೀಕರಿಸಿಕೊಂಡಿರುತ್ತಾರೆಂಬ ಸಂಗತಿ ಸ್ಪಷ್ಟವಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ೭ನೇ ಆರೋಪಿಯು ಪ್ರಶ್ನಿತ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸಿರುತ್ತಾರೆಂಬ ಅಭಿಯೋಜನೆಯ ಆರೋಪವು ಸಹಜ ಸಂಶಯಗಳಿಗೆ ಎಡೆ ಇಲ್ಲದಂತೆ ರುಜುವಾತಾಗಿರುವುದಿಲ್ಲ. ಆದ ಕಾರಣ ಅಂಶ ೩ ಮತ್ತು ೪ ನ್ನು **ನಕಾರಾತ್ಮಕವಾಗಿ** ಉತ್ತರಿಸುತ್ತೇನೆ.

೫೮. **<u>ಅಂಶ ೫:</u>** ಸಿದ್ದ ದೋಷಿಗಳೆಂದು ತೀರ್ಮಾನಿಸಲಾದ ಆರೋಪಿ ೧ರಿಂದ ೪ರವರಿಗೆ ಅಪರಾಧಿಗಳ ಪರಿವೀಕ್ಷಣಾ ಕಾಯ್ದೆ, ೧೯೫೮ ರ ವಿಧಿ ೩ರಂತೆ ವಾಗ್ದಂಡನೆ ವಿಧಿಸಿ ಬಿಡುಗಡೆಗೊಳಿಸುವ ಅಥವಾ ವಿಧಿ ೪ ರ ರೀತ್ಯಾ ಸದ್ವರ್ತನೆಯ ಷರತ್ತಿಗೆ ಒಳಪಟ್ಟು ಅವರನ್ನು ಪರಿವೀಕ್ಷಣೆಯಲ್ಲಿ ಇರಿಸಬಹುದೇ ಎಂಬ ಅಂಶವನ್ನು ವಿವೇಚಿಸಲಾಗಿದೆ.

೫೯. "ಬಾಲ್ಯ ವಿವಾಹ" ಮಾಡಿಕೊಳ್ಳುವ ವ್ಯಕ್ತಿ ಹಾಗೂ "ಬಾಲ್ಯ ವಿವಾಹ"ವನ್ನು ನೆರವೇರಿಸುವ ವ್ಯಕ್ತಿಗಳು ಸಿದ್ದದೋಷಿಗಳೆಂದು ತೀರ್ಮಾನವಾದಲ್ಲಿ ಅವರನ್ನು ಕ್ರಮವಾಗಿ ಬಾಲ್ಯ ವಿವಾಹ ನಿಷೇಧ ಕಾಯ್ದೆ, ೨೦೦೬ ರ ವಿಧಿ ೯ ಹಾಗೂ ೧೦ರ ರೀತ್ಯಾ ಶಿಕ್ಷೆಗೊಳಪಡಿಸಬೇಕಾಗುತ್ತದೆ. ಬಾಲ್ಯ ವಿವಾಹ ನಿಷೇಧ ಕಾಯ್ದೆಯು ವಿಶೇಷ ಕಾಯ್ದೆಯಾಗಿದ್ದು ಸದರಿ ಕಾಯ್ದೆಯಡಿ ದಂಡಿತವಾಗುವ ಅಪರಾಧಗಳು ವ್ಯಕ್ತಿಗತವಾಗಿ ಹಾಗೂ ಸಾಮಾಜಿಕವಾಗಿ ದುಷ್ಪರಿಣಾಮ ಬೀರುವ ಗಂಭೀರ ಸ್ವರೂಪದ ಅಪರಾಧಗಳಾಗಿರುತ್ತವೆ. ಬಾಲ್ಯವಿವಾಹದಿಂದಾಗಿ ಮಕ್ಕಳ ಮೂಲಭೂತ ಹಕ್ಕುಗಳಾದ ಉತ್ತಮ ಆರೋಗ್ಯ, ಪೋಷಣೆ, ಶಿಕ್ಷಣ ಮತ್ತು ಶೋಷಣೆ ಹಾಗೂ

ನಿಂದನೆಯಿಂದ ಮುಕ್ತಿ ಹೊಂದುವುದರಿಂದ ವಂಚಿಸಿದಂತಾಗುತ್ತದೆ. ಬಾಲ್ಯ ವಿವಾಹದಿಂದ ಉಂಬಾಗುವ ಅಪ್ರಾಪ್ತ ವಯಸ್ಸಿನ ತಾಯ್ತನವು ತಾಯಿ ಹಾಗೂ ಮಗುವನ್ನು ಅಪಾಯದ ಅಂಚಿನಲ್ಲಿ ತಳ್ಳುವಂತಾಗುತ್ತದೆ. ಇದರಿಂದಾಗಿ ಶಿಶು ಮರಣ ಹಾಗೂ ತಾಯಂದಿರ ಮರಣ ಪ್ರಮಾಣ ಹೆಚ್ಚಾಗಲು ಕಾರಣವಾಗುತ್ತದೆ. ಬಾಲ್ಯವಿವಾಹದಿಂದಾಗಿ ಕೇವಲ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದೆ ಮಾನವ ಹಕ್ಕುಗಳ ಉಲ್ಲಂಘನೆಯು ಆಗಿರುತ್ತದೆ. ಘನತೆಯಿಂದ ಆರೋಗ್ಯಕರವಾಗಿ ಬದುಕುವ ಮಕ್ಕಳ ಹಕ್ಕನ್ನು ಮೊಟಕುಗೊಳಿಸಿ ಅವರ ಪ್ರಗತಿಗೆ ತಡೆಯುಂಟು ಮಾಡುವ ಮೂಲಕ ಸಾಮಾಜಿಕ ಅಭಿವೃದ್ಧಿಯು ಕುಂಠಿತವಾಗುತ್ತದೆ. ಬಾಲ್ಯ ವಿವಾಹವು ಒಂದು ಸಾಮಾಜಿಕ ಅಪರಾಧವಾಗಿದ್ದು ಬಾಲ್ಯ ವಿವಾಹದ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಸರ್ಕಾರ, ಸಂಘ ಸಂಸ್ಥೆಗಳು ಅವಿರತವಾಗಿ ಶ್ರಮಿಸುತ್ತಿದ್ದರೂ ಸಹ ಈ ಸಾಮಾಜಿಕ ಪಿಡುಗು ಸಂಪೂರ್ಣ ನಿರ್ಮೂಲವಾಗಿರುವುದಿಲ್ಲ. "ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬"ರಡಿ ದಂಡಿತವಾಗತಕ್ಕ ಅಪರಾಧವೆಸಗುವ ಆರೋಪಿಗಳು ಬಡತನ, ಅಜ್ಞಾನ ಹಾಗೂ ತಪ್ಪು ನಂಬಿಕೆಯ ಕಾರಣಗಳಿಂದಾಗಿ ಅಪರಾಧವೆಸಗುತ್ತಾರೆ ಎಂಬ ಸಮಜಾಯಿಷಿಗಳು ಅಪರಾಧದ ತೀವ್ರತೆಯನ್ನು ಕಡಿಮೆಗೊಳಿಸುವುದಿಲ್ಲ. ಬಾಲ್ಯವಿವಾಹವು ಮಕ್ಕಳ ಅಂತರ್ಗತ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವುದಲ್ಲದೆ ಅವರ ಭವಿಷ್ಯದ ಸುಮಧುರ ಜೀವನವನ್ನು ಮೊಟಕುಗೊಳಿಸುತ್ತದೆ. ಇಂತಹ ಸಂದರ್ಭದಲ್ಲಿ ಸಿದ್ಧ ದೋಷಿಗಳನ್ನು ದಂಡಾದೇಶಕ್ಕೆ ಒಳಪಡಿಸದೆ ಅಪರಾಧಿಗಳ ಪರಿವೀಕ್ಷಣಾ ಕಾಯ್ದೆಯ ಸೌಲಭ್ಯವನ್ನು ನೀಡಿ ಬಿಡುಗಡೆಗೊಳಿಸುವುದು "ಬಾಲ್ಯ ವಿವಾಹ"ದಂತಹ ಗಂಭೀರವಾದ ಅಪರಾಧವನ್ನು ಸರಳಗೊಳಿಸಿ ಕಾನೂನಿನ ಉದ್ದೇಶಕ್ಕೆ ಅಪಚಾರವೆಸಗಿದಂತಾಗುತ್ತದೆ. ಅನುಕಂಪಕ್ಕೆ ಯೋಗ್ಯವಲ್ಲದ ಪ್ರಕರಣಗಳಲ್ಲಿ 'ವಿವೇಚನಾಧಿಕಾರ'ವನ್ನು ಬಳಸುವುದು

ಅಪಾತ್ರವಾದ ಅನುಕಂಪ ಪ್ರದರ್ಶನವಾಗುತ್ತದೆ. ಆದ ಕಾರಣ ಸಿದ್ದದೋಷಿಗಳೆಂದು ತೀರ್ಮಾನಿಸಲಾದ ಆರೋಪಿ೧ ರಿಂದ ೪ರವರು ಅಪರಾಧಿಗಳ ಪರಿವೀಕ್ಷಣಾ ಕಾಯ್ದೆಯ ವಿಧಿ ೩ ಅಥವಾ ೪ರಡಿ ಬಿಡುಗಡೆಗೊಳ್ಳಲು ಯೋಗ್ಯರಾಗಿರುವುದಿಲ್ಲ.

೬೦. ಈ ಪ್ರಕರಣದ ಘಟನೆಯು ದಿ.೦೨.೦೫.೨೦೧೬ರಂದು ಜರುಗಿರುತ್ತದೆ. ಕರ್ನಾಟಕ ಬಾಲ್ಯ ವಿವಾಹ ನಿಷೇಧ(ತಿದ್ದುಪಡಿ) ಕಾಯ್ದೆ ೨೦೧೬ ದಿ.೨೬.೦೪.೨೦೧೭ರಿಂದ ಜಾರಿಗೆ ಬಂದಿರುತ್ತದೆ. ಆದ ಕಾರಣ ದಿ.೦೨.೦೫.೨೦೧೬ರಂದು ಜಾರಿಯಲ್ಲಿದ್ದ ಬಾಲ್ಯ ವಿವಾಹ ನಿಷೇಧ ಕಾಯ್ದೆ, ೨೦೦೬ ( ನಂ:೭/೨೦೦೭)ದಲ್ಲಿ ಉಕ್ತವಾಗಿರುವ ವಿಧಿಗಳಂತೆಯೇ ಆರೋಪಿ ೧ರಿಂದ೪ರವರಿಗೆ ದಂಡಾದೇಶವನ್ನು ವಿಧಿಸಬೇಕಾಗುತ್ತದೆ.

೬೧. ಅಭಿಯೋಜನೆಯು ಅಂಶಗನ್ನು ಯಾವುದೇ ಸಕಾರಣ ಸಂಶಯಗಳಿಗೆ ಎಡೆಇಲ್ಲದಂತೆ ರುಜುವಾತು ಪಡಿಸುವ ಮೂಲಕ ಒಂದನೇ ಆರೋಪಿ ಶ್ರೀ ಮಹದೇವಸ್ವಾಮಿ @ ಮಹೇಶರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ರ ವಿಧಿ ೯ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದನ್ನು ರುಜುವಾತುಪಡಿಸಿರುತ್ತದೆ. ಬಾಲ್ಯವಿವಾಹ ನಿಷೇಧ ಕಾಯ್ದೆ, ೨೦೦೬ರ ವಿಧಿ ೯ ಕೆಳಕಂಡಂತಿದೆ.

*PROHIBITION OF CHILD MARRIAGE ACT, 2006*

*[Section : 9] Punishment for male adult marrying a child Whoever, being a male adult above eighteen years of age, contracts a child marriage shall be punishable with rigorous imprisonment which may extend to two years*

*or with fine which may extend to one lakh rupees or with both.*

೬೨. ಬಾಲ್ಯವಿವಾಹ ನಿಷೇಧ ಕಾಯ್ದೆ, ೨೦೦೬ರ ವಿಧಿ ೯ರಂತೆ ಒಂದನೆ ಆರೋಪಿಯನ್ನು ಎರಡು ವರ್ಷಗಳವರೆಗೂ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ವಾಸದ ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿಯವರೆಗೂ ವಿಸ್ತರಿಸಬಹುದಾದ ದಂಡಪಾವತಿ ಅಥವಾ ಎರಡೂ ಶಿಕ್ಷೆಗಳಿಂದ ಶಿಕ್ಷಿಸಬಹುದಾಗಿದೆ. ಈಗಾಗಲೇ ಚರ್ಚಿಸಿರುವ ಕಾರಣಗಳಿಗಾಗಿ ಸಿದ್ಧದೋಷಿಯೆಂದು ತೀರ್ಮಾನವಾಗಿರುವ ಒಂದನೆ ಆರೋಪಿ ಶ್ರೀ ಮಹದೇವಸ್ವಾಮಿ @ ಮಹೇಶರವರು ಎರಡು ವರ್ಷಗಳ ಅವಧಿಯವರೆಗೆ ಕಠಿಣ ಕಾರಾಗೃಹ ವಾಸದ ಶಿಕ್ಷೆ ಅನುಭವಿಸಲು ಹಾಗೂ ರೂ.೫,೦೦೦/–ಗಳನ್ನು ದಂಡವಾಗಿ ಪಾವತಿಸಲು ಒಂದು ವೇಳೆ ದಂಡಪಾವತಿ ಮಾಡಲು ತಪ್ಪಿದ್ದಲ್ಲಿ ೩೦ ದಿನಗಳ ಕಾಲ ಸಾದಾ ಕಾರಾಗೃಹ ಶಿಕ್ಷೆ ಅನುಭವಿಸಲು ಆದೇಶಿಸುವುದು ನ್ಯಾಯೋಚಿತವಾಗುತ್ತದೆ.

೬೩. ಅಭಿಯೋಜನೆಯು ಅಂಶ೨ನ್ನು ಯಾವುದೇ ಸಕಾರಣ ಸಂಶಯಗಳಿಗೆ ಎಡೆಇಲ್ಲದಂತೆ ರುಜುವಾತು ಪಡಿಸುವ ಮೂಲಕ ಆರೋಪಿ–೨ ಶ್ರೀ ಮಹದೇವ @ ಮಹದೇವಶೆಟ್ಟಿ, ಆರೋಪಿ–೩ ಶ್ರೀಮತಿ ಬಸಮ್ಮ, ಆರೋಪಿ–೩ ಶ್ರೀಮತಿ ನಾಗಮ್ಮ ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ರ ವಿಧಿ ೧೦ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದನ್ನು ರುಜುವಾತುಪಡಿಸಿರುತ್ತದೆ.

ಬಾಲ್ಯವಿವಾಹ ನಿಷೇಧ ಕಾಯ್ದೆ, ೨೦೦೬ರ ವಿಧಿ ೧೦ ಕೆಳಕಂಡಂತಿದೆ.

*[Section : 10] Punishment for solemnising a child marriages Whoever performs, conducts, directs or abets any child marriage*

*shall be punishable with rigorous imprisonment which may extend to two years and shall be liable to fine which may extend to one lakh rupees unless he proves that he had reasons to believe that the marriage was not a child marriage.*

**೬೪.** ಬಾಲ್ಯವಿವಾಹ ನಿಷೇಧ ಕಾಯ್ದೆ, ೨೦೦೬ರ ವಿಧಿ ೧೦ರಂತೆ ಆರೋಪಿ೨ರಿಂದ ೪ರವರನ್ನು ಎರಡು ವರ್ಷಗಳವರೆಗೂ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ವಾಸದ ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿಯವರೆಗೂ ವಿಸ್ತರಿಸಬಹುದಾದ ದಂಡಪಾವತಿ ಅಥವಾ ಎರಡೂ ಶಿಕ್ಷೆಗಳಿಂದ ಶಿಕ್ಷಿಸಬಹುದಾಗಿದೆ. ಈಗಾಗಲೇ ಚರ್ಚಿಸಿರುವ ಕಾರಣಗಳಿಗಾಗಿ ಸಿದ್ದದೋಷಿಗಳೆಂದು ತೀರ್ಮಾನವಾಗಿರುವ ೨ನೇ ಆರೋಪಿ ಶ್ರೀ ಮಹದೇವ @ ಮಹದೇವಶೆಟ್ಟಿ ೩ನೇ ಆರೋಪಿ ಶ್ರೀಮತಿ ಬಸಮ್ಮ ಮತ್ತು ೪ನೇ ಆರೋಪಿ ಶ್ರೀಮತಿ ನಾಗಮ್ಮ ತಲಾ ಎರಡು ವರ್ಷಗಳ ಅವಧಿಯವರೆಗೆ ಕಠಿಣ ಕಾರಾಗೃಹ ವಾಸದ ಶಿಕ್ಷೆ ಅನುಭವಿಸಲು ಹಾಗೂ ಪ್ರತ್ಯೇಕವಾಗಿ ತಲಾ ರೂ.೫,೦೦೦/-ಗಳನ್ನು ದಂಡವಾಗಿ ಪಾವತಿಸಲು ಒಂದು ವೇಳೆ ದಂಡಪಾವತಿ ಮಾಡಲು ತಪ್ಪಿದ್ದಲ್ಲಿ ತಲಾ ೩೦ ದಿನಗಳ ಕಾಲ ಸಾದಾ ಕಾರಾಗೃಹ ವಾಸದ ಶಿಕ್ಷೆ ಅನುಭವಿಸಲು ಆದೇಶಿಸುವುದು ನ್ಯಾಯೋಚಿತವಾಗುತ್ತದೆ.

**೬೫.** ಅಭಿಯೋಜನೆಯು ಅಂಶ೩ ಮತ್ತು ೪ನ್ನು ಯಾವುದೇ ಸಕಾರಣ ಸಂಶಯಗಳಿಗೆ ಎಡೆಇಲ್ಲದಂತೆ ರುಜುವಾತು ಪಡಿಸಲು ವಿಫಲವಾಗುವ ಮೂಲಕ ಆರೋಪಿ-೫ ಶ್ರೀ ಸೋಮಣ್ಣ ಮತ್ತು ಆರೋಪಿ-೭ ಶ್ರೀ ಕೃಷ್ಣರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ರ ವಿಧಿ ೧೧ರ ರೀತ್ಯಾ

ದಂಡನೀಯವಾದ ಅಪರಾಧವೆಸಗಿರುವುದನ್ನು ರುಜುವಾತುಪಡಿಸಲು ವಿಫಲವಾಗಿರುತ್ತದೆ. ಆದ ಕಾರಣ ಆರೋಪಿ-೫ ಶ್ರೀ ಸೋಮಣ್ಣ ಮತ್ತು ಆರೋಪಿ-೭ ಶ್ರೀ ಕೃಷ್ಣರವರನ್ನು ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆಗೊಳಿಸುವುದು ನ್ಯಾಯೋಚಿತವಾಗುತ್ತದೆ. ಅದರಂತೆ ಮೇಲ್ಕಂಡ ಚರ್ಚೆಯ ಫಲಶೃತಿಯಿಂದ ಕೆಳಕಂಡ

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ವಿಧಿ ೨೫೫(೨)ರಡಿ ಪ್ರವರ್ತಿಸಿ ೧ನೇ ಆರೋಪಿ ಶ್ರೀ ಮಹದೇವಸ್ವಾಮಿ @ ಮಹೇಶರವರನ್ನು ಬಾಲ್ಯ ವಿವಾಹ ನಿಷೇಧ ಕಾಯ್ದೆ, ವಿಧಿ ೯ರ ರೀತ್ಯ ದಂಡನೀಯವಾದ ಅಪರಾಧಕ್ಕಾಗಿ ಸಿದ್ದದೋಷಿಯೆಂದು ತೀರ್ಮಾನಿಸಿ ಎರಡು ವರ್ಷಗಳ ಅವಧಿಯವರೆಗೆ ಕಠಿಣ ಕಾರಾಗೃಹ ವಾಸದ ಶಿಕ್ಷೆ ಅನುಭವಿಸಲು ಹಾಗೂ ರೂ.೫,೦೦೦/-ಗಳನ್ನು ದಂಡವಾಗಿ ಪಾವತಿಸಲು ಒಂದು ವೇಳೆ ದಂಡಪಾವತಿ ಮಾಡಲು ತಪ್ಪಿದ್ದಲ್ಲಿ ೩೦ ದಿನಗಳ ಕಾಲ ಸಾದಾ ಕಾರಾಗೃಹ ವಾಸದ ಶಿಕ್ಷೆ ಅನುಭವಿಸಲು ಆದೇಶಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ವಿಧಿ ೨೫೫(೨)ರಡಿ ಪ್ರವರ್ತಿಸಿ ೨ನೇ ಆರೋಪಿ ಶ್ರೀ ಮಹದೇವ @

ಮಹದೇವಶೆಟ್ಟಿ ೩ನೇ ಆರೋಪಿ ಶ್ರೀಮತಿ ಬಸಮ್ಮ ಮತ್ತು ೪ನೇ ಆರೋಪಿ ಶ್ರೀಮತಿ ನಾಗಮ್ಮ ರವರನ್ನು ಬಾಲ್ಯ ವಿವಾಹ ನಿಷೇಧ ಕಾಯ್ದೆ, ೨೦೦೬ರ ವಿಧಿ ೧೦ರ ರೀತ್ಯ ದಂಡನೀಯವಾದ ಅಪರಾಧಕ್ಕಾಗಿ ಸಿದ್ದದೋಷಿಗಳೆಂದು ತೀರ್ಮಾನಿಸಿ ತಲಾ ಎರಡು ವರ್ಷಗಳ ಅವಧಿಯವರೆಗೆ ಕಠಿಣ ಕಾರಾಗೃಹ ವಾಸದ ಶಿಕ್ಷೆ ಅನುಭವಿಸಲು ಹಾಗೂ ಪ್ರತ್ಯೇಕವಾಗಿ ತಲಾ ರೂ.೫,೦೦೦/–ಗಳನ್ನು ದಂಡವಾಗಿ ಪಾವತಿಸಲು ಒಂದು ವೇಳೆ ದಂಡಪಾವತಿ ಮಾಡಲು ತಪ್ಪಿದ್ದಲ್ಲಿ ತಲಾ ೩೦ ದಿನಗಳ ಕಾಲ ಸಾದಾ ಕಾರಾಗೃಹ ವಾಸದ ಶಿಕ್ಷೆ ಅನುಭವಿಸಲು ಆದೇಶಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ವಿಧಿ ೨೫೫(೧)ರಡಿ ಪ್ರವರ್ತಿಸಿ ಆರೋಪಿ–೫ ಶ್ರೀ ಸೋಮಣ್ಣ ಮತ್ತು ಆರೋಪಿ–೭ ಶ್ರೀ ಕೃಷ್ಣರವರನ್ನು ಬಾಲ್ಯ ವಿವಾಹ ನಿಷೇಧ ಕಾಯ್ದೆ ೨೦೦೬ರ ವಿಧಿ ೧೧ರ ರೀತ್ಯಾ ದಂಡನೀಯವಾದ ಅಪರಾಧದ ಆರೋಪದಿಂದ ದೋಷಮುಕ್ತಗೊಳಿಸಿ ನಿರ್ದೋಷಿಗಳೆಂದು ತೀರ್ಮಾನಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ.

ಆರೋಪಿ೧ರಿಂದ ೫ ಮತ್ತು ೭ ಹಾಗೂ ಅವರ ಜಾಮೀನುದಾರರು ನೀಡಿರುವ ಜಾಮೀನು ಬಂಧಪತ್ರಗಳನ್ನು ರದ್ದುಗೊಳಿಸಲಾಗಿದೆ.

ಈ ತೀರ್ಪಿನ ಪ್ರತಿಯನ್ನು ಆರೋಪಿ ೧ರಿಂದ ೪ರವರಿಗೆ ಕೂಡಲೇ ಉಚಿತವಾಗಿ ನೀಡಲು ಆದೇಶಿಸಲಾಗಿದೆ.

(ನನ್ನಿಂದ ನೀಡಲಾದ ಉಕ್ತಲೇಖನವನ್ನು ಶೀಘ್ರಲಿಪಿಗಾರರು ಪಡೆದುಕೊಂಡು ಬೆರಳಚ್ಚು ಮಾಡಿದ್ದನ್ನು ಓದಿ , ತಿದ್ದಿ ನಂತರ ಮುಕ್ತ ನ್ಯಾಯಾಲಯದಲ್ಲಿ ಇಂದು ದಿನಾಂಕಃ ೨೭.೧೨.೨೦೧೯ ರಂದು ಪ್ರಕಟಿಸಲಾಯಿತು)

(ಎಸ್.ಜೆ. ಕೃಷ್ಣ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

## :ಅನುಸೂಚಿಃ

**ಅಭಿಯೋಜನೆಯ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ :**

ಫ್ರಾಸಾ-೧ : ಶ್ರೀ ಶೇಷಾದ್ರಿ ಟಿ
ಫ್ರಾಸಾ-೨ : ಕು. ಸ್ವಾತಿ
ಫ್ರಾಸಾ-೩ : ಶ್ರೀ ರವೀಂದ್ರ
ಫ್ರಾಸಾ-೪ : ಶ್ರೀ ಆನಂದ ಎನ್
ಫ್ರಾಸಾ-೫ : ಶ್ರೀಮತಿ ನಾಗರತ್ನ
ಫ್ರಾಸಾ-೬ : ಶ್ರೀ ತಿಮ್ಮರಾಜು

ಅಭಿಯೋಜನೆಯ ಪರ ಪ್ರದರ್ಶಿಸಲಾದ ದಾಖಲೆಗಳ ಪಟ್ಟಿ :

ನಿಪಿ–೧ : ಸ್ಥಳ ಮಹಜರ್

ನಿಪಿ–೧(ಎ) : ಫ್ರಾಸಾ–೧ ರವರ ರುಜು

ನಿಪಿ–೧(ಬಿ ) : ಫ್ರಾಸಾ–೩ ರವರ ರುಜು

ನಿಪಿ–೧ (ಸಿ) : ಫ್ರಾಸಾ–೪ ರವರ ರುಜು

ನಿಪಿ–೨ : ದೂರು

ನಿಪಿ–೨(ಎ) : ಫ್ರಾಸಾ–೧ ರವರ ರುಜು

ನಿಪಿ–೨(ಬಿ ) : ಫ್ರಾಸಾ–೪ ರವರ ರುಜು

ನಿಪಿ–೩ : ಕು. ಆರ್ ಸುಧಾರವರ ಶಾಲಾ ದಾಖಲಾತಿಯ ದೃಡೀಕರಣ ಪತ್ರ

ನಿಪಿ–೩(ಎ) : ಶ್ರೀ ಮಹದೇವಸ್ವಾಮಿಯವರ ರುಜು

ನಿಪಿ–೪ : ಕು. ಆರ್ ಸುಧಾರವರ ವಯಸ್ಸಿನ ದೃಡೀಕರಣ ಪತ್ರ

ನಿಪಿ–೫ ಮದುವೆಯ ಕರೆಯೋಲೆ

ನಿಪಿ–೬ : ಪ್ರ.ವ.ವರದಿ

ನಿಪಿ–೬(ಎ) : ಫ್ರಾಸಾ–೪ ರವರ ರುಜು

ನಿಪಿ–೭ : ಪಿಎಫ್ ಸಂಖ್ಯೆ೫೫/೨೦೧೬

ನಿಪಿ–೭(ಎ) : ಫ್ರಾಸಾ–೪ ರವರ ರುಜು

ನಿಪಿ–೮ : ಮೂಲ ರಿಜಿಸ್ಟರ್

ನಿಪಿ–೮ ಎ : ನಿಪಿ–8 ರಲ್ಲಿ ಕು. ಸುಧಾರವರಿಗೆ ಸಂಬಂಧಿಸಿದ ದಾಖಲೆಯ ಭಾಗ

ನಿಪಿ–೮ ಬಿ : ನಿಪಿ–೮ ಎ ದಾಖಲೆಯ ದೃಡೀಕೃತ ಪ್ರತಿ

ನಿಪಿ–೯ : ಶಾಲಾ ದಾಖಲಾತಿಯ ರಿಜಿಸ್ಟರ್

ನಿಪಿ–೯ ಎ : ಶಾಲಾ ದಾಖಲಾತಿಯ ರಿಜಿಸ್ಟರ್ ನ ದೃಡೀಕೃತ ಪ್ರತಿ

ಅಭಿಯೋಜನೆಯ ಪರ ಗುರುತಿಸಲಾದ ಮು.ಮಾ. ಪಟ್ಟಿ :

–ಇಲ್ಲ –

ಆರೋಪಿ ಪರ ವಿಚಾರಿಸಲಾದ ದಾಖಲೆಗಳ ಪಟ್ಟಿ :

-ಇಲ್ಲ -

ಆರೋಪಿ ಪರ ಪ್ರದರ್ಶಿಸಲಾದ ದಾಖಲೆಗಳ ಪಟ್ಟಿ :

-ಇಲ್ಲ -

ಆರೋಪಿ ಪರ ಗುರುತಿಸಲಾದ ಮು.ಮಾ. ಪಟ್ಟಿ :

- ಇಲ್ಲ -

(ಎಸ್.ಜೆ. ಕೃಷ್ಣ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕೊಳ್ಳೇಗಾಲ.